# ಆರು ದಶಕಗಳ ರಾಷ್ಟ್ರ ರಾಜಕಾರಣದ ಕರಿನೆರಳು

(ಸಾಚಾರ್ ವರದಿಯ ಹಿನ್ನೆಲೆಯಲ್ಲಿ ಮುಸ್ಲಿಂ ಸಮುದಾಯಗಳ ಕುರಿತು ಒಂದು ವಿಶ್ಲೇಷಣೆ)







ಲೇಖಕರು

■ ಖಾಸಿಂಸಾಬ್.ಎ

# ಆರು ದಶಕಗಳ
# ರಾಷ್ಟ್ರ ರಾಜಕಾರಣದ ಕರಿನೆರಳು

(ಸಾಚಾರ್ ವರದಿಯ ಹಿನ್ನೆಲೆಯಲ್ಲಿ ಮುಸ್ಲಿಂ ಸಮುದಾಯಗಳ
ಕುರಿತು ಒಂದು ವಿಶ್ಲೇಷಣೆ)

ಲೇಖಕರು
**ಖಾಸಿಂಸಾಬ್.ಎ**

ಪ್ರಕಾಶಕರು
**ಸಾಮಾಜಿಕ ಕ್ರಿಯಾ ಸಮಿತಿ(ರಿ)**
ನಂ.16(19), ಮದರ್‌ತೇರೇಸ ರಸ್ತೆ, ಮರಿಯಣ್ಣ ಪಾಳ್ಯ,
ಹೆಚ್.ಎ.ಫಾರಂ ಅಂಚೆ, ಹೆಬ್ಬಾಳ, ಬೆಂಗಳೂರು–24
ಮೊಬೈಲ್:9880735839 **E-mail : skssouharda@yahoo.co.in**

ಬೆಂಬಲಿತ ಬೆಲೆ : ರೂ.10.00
ಪ್ರತಿಗಳು : 1000

ದೇಶದ ಮುಸ್ಲಿಮರು ಅವಕಾಶಗಳಿಂದ ವಂಚಿತರಾಗಿದ್ದಾರೆಂದು, ಜನಸಂಖ್ಯಾ ಪ್ರಮಾಣದಲ್ಲಿ ಪ್ರಾತಿನಿಧ್ಯ ಪಡೆದಿಲ್ಲವೆಂದು ದುರ್ಬಲ ವರ್ಗಗಳಲ್ಲಿ ಮುಸ್ಲಿಮರೂ ಸೇರುತ್ತಾರೆ ಎಂಬ ವಾಸ್ತವವನ್ನು ಮನಗಂಡ ದೇಶದ ಪ್ರಾಜ್ಞರು, ಅವರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿ ಬಗ್ಗೆ ಎಂದಿನಿಂದಲೂ ಕಳವಳ ವ್ಯಕ್ತಪಡಿಸಿದ್ದಾರೆ. ಸರ್ಕಾರಗಳು ಈ ಬಗ್ಗೆ ಅಧ್ಯಯನ ನಡೆಸುವ ಏರ್ಪಾಟನ್ನೂ ಮಾಡಿದ್ದವು. 19ನೇ ಶತಮಾನದಲ್ಲಿ ಸುಪ್ರಸಿದ್ಧ ಬ್ರಿಟಿಷ್ ಆಡಳಿತಗಾರ ಮಾನ್‌ಸ್ಟುಆರ್ಟ್ ಎಲ್ಫಿನ್‌ಸ್ಟನ್ ಎಂಬವರು, ಮುಸ್ಲಿಮರಲ್ಲಿ ಹಿಂದುಳಿದವರ ಅಭಿವೃದ್ಧಿಗಾಗಿ ವಿಶೇಷ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯ ಎಂದು ಅಭಿಪ್ರಾಯಪಟ್ಟಿದ್ದರು. 1935ರಲ್ಲಿ ಅಂದಿನ ಭಾರತ ಸರ್ಕಾರ, ಹಿಂದೂ ದಲಿತರಿಗೆ ನೀಡುವ ಮೀಸಲಾತಿಯನ್ನು ಮುಸ್ಲಿಂ ದಲಿತರಿಗೂ ನೀಡಲು ಕಾಯ್ದೆ ಮಾಡಿತು. ಆದರೆ ನಂತರದ ದಿನಗಳಲ್ಲಿ ಇದನ್ನು ತಡೆಯಲಾಯಿತು.

25 ವರ್ಷಗಳ ಹಿಂದೆ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರು ಅಲ್ಪಸಂಖ್ಯಾತರು, ಪ.ಜಾತಿ ಮತ್ತು ಪಂಗಡಗಳಿಗೆ ಸೇರಿದವರ ಸ್ಥಿತಿಗತಿಯನ್ನು ಅಧ್ಯಯನ ಮಾಡಲು, ಡಾ. ಗೋಪಾಲ ಸಿಂಗ್ ನೇತೃತ್ವದಲ್ಲಿ ಹತ್ತು ಜನ ಸದಸ್ಯರ ಸಮಿತಿ ರಚಿಸಿದ್ದರು. 1983 ಜೂನ್ 14ರಂದು ಈ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿ, "ತಮ್ಮನ್ನು ತಾರತಮ್ಯಕ್ಕೆ ಗುರಿಪಡಿಸಲಾಗಿದೆ ಎಂಬ ಭಾವನೆ ಈ ಸಮುದಾಯಗಳಲ್ಲಿ ಬೇರೂರಿದ್ದು, ದೇಶದ ಮುಖ್ಯ ಪ್ರವಾಹದಲ್ಲಿ ಇವರು ಪರಿಣಾಮಕಾರಿ ಭಾಗವಾಗಬೇಕೆಂಬುದು ನಮ್ಮ ಉದ್ದೇಶವಾಗಿದ್ದರೆ, ಇವರಲ್ಲಿ ಈ ಭಾವನೆಯನ್ನು ಆಮೂಲಾಗ್ರವಾಗಿ ಕಿತ್ತು ಹಾಕಬೇಕು" ಎಂದು ಆಗ್ರಹಪಡಿಸಿತ್ತು. ಆದರೂ ಸ್ವತಂತ್ರ ನಂತರ ಭಾರತೀಯ ಸಮಾಜದ ಎರಡು ಪ್ರಬಲ ಸಮುದಾಯಗಳು, ಅಕ್ಷರಶಃ ಪ್ರಜಾಪ್ರಭುತ್ವದ ಆಧಾರ ಸ್ತಂಭಗಳಾಗಿ ನಿಂತಿವೆ. ಯಾವುದೇ ಸರ್ಕಾರ ನಿರ್ಣಾಯಕ ಕೇಂದ್ರ ಬಿಂದುವಿನ ಮತದಾರರಾಗಿ ಮಹತ್ವದ ಪಾತ್ರ ವಹಿಸಿದ್ದಾರೆ. ಅಂತ ನಿರ್ಣಾಯಕ ಸಮುದಾಯಗಳಾದ ದಲಿತರು ಮತ್ತು ಮುಸ್ಲಿಮರ ಸಾಮಾಜಿಕ, ಆರ್ಥಿಕ, ಹಾಗೂ ರಾಜಕೀಯ ಸ್ಥಿತಿಗತಿಗಳು ಶೋಚನೀಯವಾಗಿವೆ.

2005ರಲ್ಲಿ ಯುಪಿಎ ಸರ್ಕಾರದ ಪ್ರಧಾನಿ ಮನಮೋಹನಸಿಂಗ್, ಮುಸ್ಲಿಮರ ಸ್ಥಿತಿಗತಿ ಅಧ್ಯಯನಕ್ಕೆ ಹಾಗೂ ಅಗತ್ಯ ಶಿಫಾರಸುಗಳನ್ನು ನೀಡುವುದಕ್ಕೆ ಜಸ್ಟಿಸ್ ರಾಜೆಂದರ್ ಸಾಚಾರ್ ಅಧ್ಯಕ್ಷತೆಯಲ್ಲಿ ಏಳು ಜನ ಸದಸ್ಯರ ಸಮಿತಿ ರಚಿಸಿದರು. ಈ ಸಮಿತಿಯ ವರದಿಯನ್ನು ಕಳೆದ ನವೆಂಬರ್‌ನಲ್ಲಿ ಲೋಕಸಭೆಯಲ್ಲಿ

ಮಂಡಿಸಲಾಯಿತು. ಅವಕಾಶವಂಚಿತರು ಮೊದಲ ಫಲಾನುಭವಿಗಳಾಗಬೇಕು ಎಂಬರ್ಥದಲ್ಲಿ ಪ್ರಧಾನಿ, "ಮುಸ್ಲಿಮರು ಮೊದಲ ಫಲಾನುಭವಿಗಳಾಗಬೇಕು"ಎಂದಾಗ, ಅವನ್ನು ಹಿಂದುತ್ವವಾದಿ ಶಕ್ತಿಗಳು ತಿರುಚಿ "ಧರ್ಮಾಧಾರದ ತಾರತಮ್ಯಕ್ಕೆ ಪ್ರಧಾನಿಯವರು ಕುಮ್ಮಕ್ಕು ನೀಡುತ್ತಿದ್ದಾರೆ; ಇದು ತುಷ್ಟೀಕರಣ ನೀತಿ; ಚುನಾವಣಾ ಲೆಕ್ಕಾಚಾರ ಆಧಾರಿತ ಈ ನೀತಿ ಖಂಡನಾರ್ಹ" ಎಂದೆಲ್ಲಾ ಹಾರಾಡಿದವು.

ಡಾ. ಗೋಪಾಲಸಿಂಗ್ ಸಮಿತಿಯು, ಪ.ಜಾತಿ/ಪಂಗಡಗಳು ಮತ್ತು ಹಿಂದುಳಿದ ವರ್ಗಗಳ ಸ್ಥಿತಿಗತಿ ಜೊತೆಗೆ ಮುಸ್ಲಿಮರ ಸ್ಥಿತಿಗತಿಯನ್ನು ಹೋಲಿಸಿ ಅಧ್ಯಯನ ಮಾಡಿತ್ತು; ಈಗ ಡಾ. ರಾಜಿಂದರ್ ಸಾಚಾರ್ ಸಮಿತಿ ಮುಸ್ಲಿಮರ ಸ್ಥಿತಿಗತಿಯನ್ನು ಇನ್ನೂ ಆಳವಾಗಿ ಅಧ್ಯಯನ ಮಾಡಿದೆ. ಮುಖ್ಯವಾಗಿ ಮುಸ್ಲಿಮರ ಐಡೆಂಟಿಟಿ, ಭದ್ರತೆ ಮತ್ತು ಪಾಲು ಪಡೆದುಕೊಳ್ಳುವಿಕೆ ಬಗ್ಗೆ ಈ ಸಮಿತಿ ಅಧ್ಯಯನ ಮಾಡಿದೆ. ಪಾಲು ಪಡೆದುಕೊಳ್ಳುವಿಕೆಯ ಮೇಲೆ ಹೆಚ್ಚಿನ ಅಧ್ಯಯನ ಮಾಡಿರುವುದು ಮತ್ತು ವಿಶಾಲ ದೃಷ್ಟಿಕೋನದಿಂದ ಇಡೀ ಅಧ್ಯಯನ ನಡೆಸಿ, ಮಹತ್ವದ ಅಂಶಗಳನ್ನು (ಉದಾ: ಇತರರ ದೃಷ್ಟಿಕೋನ, ಜನಸಂಖ್ಯೆ ಪ್ರಮಾಣ ಹಾಗೂ ದೇಶಾದ್ಯಂತ ಅದರ ಹರಹು, ಆದಾಯದ ಪ್ರಮಾಣ, ಉದ್ಯೋಗ ಮತ್ತು ಆರೋಗ್ಯ ಸೌಲಭ್ಯಗಳಲ್ಲಿ ಪಡೆದಿರುವ ಪಾಲು, ಜೀವನಮಟ್ಟ, ಬಡತನದ ಪ್ರಮಾಣ, ಸಾಮಾಜಿಕ ಸ್ಥಾನಮಾನ, ಭೌತಿಕ ಸಂಪನ್ಮೂಲಗಳು ತಲುಪಿರುವ ಪ್ರಮಾಣ ಇತ್ಯಾದಿ) ಕೇಂದ್ರೀಕರಿಸಿ ನಡೆದಿರುವ ಆಳವಾದ ಅಧ್ಯಯನ ಮತ್ತು ಧರ್ಮದೊಳಗೆ ಜಾತಿಯಿಂದಾಗಿರುವ ಅನ್ಯಾಯದ ಕಡೆ ಗಮನಹರಿಸಿರುವುದು ಉತ್ತಮವಾದ ಬೆಳವಣಿಗೆಯಾಗಿದೆ. ಭಾರತದ ಇಸ್ಲಾಂ ಧರ್ಮವು ಶೇ.85ರಷ್ಟು ಹಿಂದುಳಿದ ಅಸ್ಪೃಶ್ಯ ಸಮುದಾಯಗಳಿಂದ ಮತಾಂತರಗೊಂಡ ಅನುಯಾಯಿಗಳನ್ನು ಹೊಂದಿದ್ದು, ಮೂಲವಾಗಿ ಧಾರ್ಮಿಕ ಸ್ವರೂಪದ ಒಳಗೆ ಜಾತಿ ಕೇಂದ್ರಿತ ಸಾಂಪ್ರದಾಯಿಕ ಪ್ರಜ್ಞೆಯ ರಚನೆಯನ್ನು ಹೊಂದಿದೆ.

ದೇಶದ ವಿವಿಧ ರಾಜ್ಯಗಳಿಗೆ ಭೇಟಿ ನೀಡಿದ ಸಮಿತಿ, ಗಮನಾರ್ಹ ಪ್ರಮಾಣದಲ್ಲಿ ಮುಸ್ಲಿಮರು ವಾಸಿಸಿರುವ 13 ರಾಜ್ಯಗಳಿಂದ ಮಾಹಿತಿ ಸಂಗ್ರಹಿಸಿದೆ. (ಸೇನೆಯಲ್ಲಿ ಮುಸ್ಲಿಮರಿಗೆ ದೊರಕಿರುವ ಪ್ರಾತಿನಿಧ್ಯವನ್ನೂ ಸಂಗ್ರಹಿಸಿತಾದರೂ, ರಕ್ಷಣಾ ಖಾತೆಯ ವಿನಂತಿಯ ಮೇರೆಗೆ ಅದನ್ನು ವರದಿಯಲ್ಲಿ ಸೇರ್ಪಡೆ ಮಾಡಿಲ್ಲ). ಸಾಚಾರ್ ಸಮಿತಿಯು ದೇಶದ 80 ಜಿಲ್ಲೆಗಳಿಂದ ದೊರಕಿದ ಮಾಹಿತಿಯನ್ನು ವಿಶ್ಲೇಷಿಸಿ, ಶಿಫಾರಸುಗಳನ್ನು ನೀಡಿತ್ತು.

ಸಮಿತಿಯು ತನ್ನ ಅಂತಿಮ ವರದಿಯನ್ನು ಶಿಫಾರಸುಗಳೊಂದಿಗೆ 17 ನವೆಂಬರ್ 2006ರಂದು ಪ್ರಧಾನಿಗೆ ಸಲ್ಲಿಸಿತು. ಪ್ರಧಾನಿಯವರು ಈ ವರದಿಯನ್ನು ನವೆಂಬರ್ 30 ರಂದು ಸಂಸತ್ತಿನಲ್ಲಿ ಮಂಡಿಸಿದರು.

ಹನ್ನೆರಡು ಅಧ್ಯಾಯಗಳಿರುವ ವರದಿಯು, ಒಟ್ಟು 478 ಪುಟಗಳನ್ನು ಹೊಂದಿದ್ದು, ದೇಶದಲ್ಲಿ ಗರಿಷ್ಠ ಮುಸ್ಲಿಂ ಜನಸಂಖ್ಯೆಯನ್ನು ಹೊಂದಿದ 13 ರಾಜ್ಯಗಳಿಗೆ ಭೇಟಿ ನೀಡಿ ಕಂಡ ವಾಸ್ತವವನ್ನು ದಾಖಲಿಸಿದೆ. ಮುಸ್ಲಿಮರಿಗೆ ಸಿಕ್ಕಿರುವ ಶೈಕ್ಷಣಿಕ-ಆರೋಗ್ಯ ಸೌಲಭ್ಯಗಳನ್ನು, ಸರ್ಕಾರಿ-ಖಾಸಗಿ ಕ್ಷೇತ್ರಗಳಲ್ಲಿ ದೊರೆತಿರುವ ಉದ್ಯೋಗಾವಕಾಶಗಳನ್ನು ಸರ್ಕಾರಿ-ಬ್ಯಾಂಕ್ ಸಾಲ, ಸಹಾಯಧನವನ್ನು ಸಾಮಾಜಿಕ-ಪೌರ ಸೌಲಭ್ಯಗಳನ್ನು ದಾಖಲಿಸಿ ವಿಶ್ಲೇಷಿಸಿದೆ. ಬಡತನದ ಪ್ರಮಾಣವನ್ನೂ ನಮೂದಿಸಿದೆ. ವಕ್ಫ್ ಆಸ್ತಿ ಬಗ್ಗೆ ಹಾಗೂ ಮುಸ್ಲಿಮರಲ್ಲಿ ಹಿಂದುಳಿದವರನ್ನು ಗುರುತಿಸುವ ಬಗ್ಗೆ ಸಲಹೆ ನೀಡಿರುವುದು ಈ ಸಮಿತಿಯ ವೈಶಿಷ್ಟ್ಯ.

“ಮೀಸಲಾತಿಯ ಪ್ರಯೋಜನವು ಮುಂದುವರೆದ ಮುಸ್ಲಿಮರಿಗೆ ದೊರಕುತ್ತದೆ. ಮುಸ್ಲಿಮರ ಸ್ಥಿತಿಗತಿಯನ್ನು ಒಟ್ಟಾರೆ ಉತ್ತಮಪಡಿಸುವುದು ಮುಖ್ಯವೇ ಹೊರತು, ಸರ್ಕಾರಿ ಕ್ಷೇತ್ರದಲ್ಲಿ ಮೀಸಲಾತಿಯನ್ನು ಒದಗಿಸಿದರಷ್ಟೇ ಸಾಲದು; ಮೀಸಲಾತಿ ಮಾರ್ಗವು ಋಣಾತ್ಮಕ ಪರಿಣಾಮಗಳನ್ನು ಉಂಟು ಮಾಡುತ್ತದೆ; ಅಲ್ಲದೆ, ಮೀಸಲಾತಿಯ ಪ್ರಯೋಜನವು ಮುಂದುವರೆದ ಮುಸ್ಲಿಮರಿಗೆ ದೊರಕುತ್ತದೆ” ಎಂಬ ಅಭಿಪ್ರಾಯದೊಂದಿಗೆ “ಎಲ್ಲಾ ಮುಸ್ಲಿಮರಿಗೆ ಮೀಸಲಾತಿ ದೊರಕಬೇಕು”ಎಂಬ ಅಭಿಪ್ರಾಯವೂ ವ್ಯಕ್ತವಾಗಿರುವುದನ್ನು, ಜೊತೆಗೆ “ಮೀಸಲಾತಿಯು ದಲಿತ ಮುಸ್ಲಿಮರಿಗಷ್ಟೇ ಸಿಗಬೇಕು”ಎಂಬ ಅಭಿಪ್ರಾಯವೂ ವ್ಯಕ್ತವಾಗಿರುವುದನ್ನು ಮತ್ತು ಮೀಸಲಾತಿ ಬಗ್ಗೆ ಮುಸ್ಲಿಮರಲ್ಲಿ ವಿವಿಧ ಅಭಿಪ್ರಾಯಗಳಿರುವುದನ್ನು ವರದಿ ದಾಖಲಿಸಿದೆ.

ಮುಸ್ಲಿಮರು ಪ್ರಗತಿ ಸಾಧಿಸಲು ರಾಜಕೀಯ ಕ್ಷೇತ್ರಗಳಲ್ಲಿ ಅವರಿಗೆ ಕಡ್ಡಾಯ ಪ್ರಾತಿನಿಧ್ಯ ದೊರಕಬೇಕು; ದೇಶದ ಹಲವಾರು ಕ್ಷೇತ್ರಗಳಲ್ಲಿ ಮುಸ್ಲಿಂ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈ ಬಿಡಲಾಗಿದೆ; ಮುಸ್ಲಿಮರು ಹೆಚ್ಚಿರುವ ಮತಕ್ಷೇತ್ರಗಳನ್ನು ಪ.ಜಾತಿಯವರಿಗಾಗಿ ಮೀಸಲಿಡಲಾಗಿದೆ; ಪ.ಜಾತಿಯವರು ಹೆಚ್ಚಿರುವ ಮತಕ್ಷೇತ್ರಗಳನ್ನು ಸಾಮಾನ್ಯ ಕ್ಷೇತ್ರಗಳೆಂದು ನಿರ್ಧರಿಸಲಾಗಿದೆ. ಹೀಗೆ ರಾಜಕೀಯ ಪಾಲ್ಗೊಳ್ಳುವಿಕೆಯ ಅವಕಾಶವನ್ನು ಮುಸ್ಲಿಮರಿಂದ ಕಿತ್ತುಕೊಳ್ಳಲಾಗಿದೆ ಎಂಬ ಅಭಿಪ್ರಾಯಗಳು ಮುಸ್ಲಿಮರಿಂದ ವ್ಯಕ್ತವಾಗಿರುವುದನ್ನು ವರದಿ ದಾಖಲಿಸಿದೆ.

ಸಾಕ್ಷರತಾ ಪ್ರಮಾಣವು ರಾಷ್ಟ್ರೀಯ ಸರಾಸರಿಗಿಂತ ಮುಸ್ಲಿಮರಲ್ಲಿ ಕಡಿಮೆ ಇದೆ. ನಗರವಾಸಿ ಮುಸ್ಲಿಮೇತರರು ಮತ್ತು ಮುಸ್ಲಿಮರಲ್ಲಿ ಸಾಕ್ಷರತಾ ಮಟ್ಟದಲ್ಲಿನ ಅಂತರ ಜಾಸ್ತಿ ಇದೆ. ಮುಸ್ಲಿಂ ಪುರುಷ-ಮಹಿಳೆಯರ ನಡುವೆಯೂ ಸಾಕ್ಷರತೆಯಲ್ಲಿ ಅಂತರ ಹೆಚ್ಚು. ಮುಸ್ಲಿಮೇತರ ಮಹಿಳೆಯರಿಗಿಂತ ಮುಸ್ಲಿಂ ಮಹಿಳೆಯರಲ್ಲಿ ಸಾಕ್ಷರತೆ

ಕಡಿಮೆ ಇದೆ. 6–14 ವಯೋಮಿತಿಯಲ್ಲಿನ ಮುಸ್ಲಿಂ ಮಕ್ಕಳಲ್ಲಿ ಶೇ. 25 ರಷ್ಟು ಮಕ್ಕಳು ಶಾಲೆಗೆ ದಾಖಲಾಗೇ ಇಲ್ಲ. 7ನೇ ತರಗತಿವರೆಗಿನ ಹಂತ ತಲುಪುವುದರಲ್ಲಿ ಮುಸ್ಲಿಂ ಮಕ್ಕಳು ಶಾಲೆ ಬಿಡುವ ಪ್ರಮಾಣವು ಮುಸ್ಲಿಮೇತರರಲ್ಲಿ ಇರುವುದಕ್ಕಿಂತ ಹೆಚ್ಚಿಗಿದೆ. ಮುಸ್ಲಿಮೇತರರಲ್ಲಿ ಇರುವ ಪದವೀಧರರ ಪ್ರಮಾಣ ಮತ್ತು ಮುಸ್ಲಿಮರಲ್ಲಿ ಇರುವ ಪದವೀಧರರ ಪ್ರಮಾಣದ ನಡುವಣ ಅಂತರ ಹೆಚ್ಚುತ್ತಾ ಬಂದಿದೆ. ಮುಸ್ಲಿಮರಲ್ಲಿ ಕೇವಲ ಶೇ. 4 ರಷ್ಟು ಜನ ಪದವೀಧರರು ಮತ್ತು ಕೇವಲ ಶೇ. 2 ರಷ್ಟು ಜನ ಸ್ನಾತಕೋತ್ತರ ಪದವೀಧರರು ಇದ್ದಾರೆ. ಎಲ್ಲಾ ಧಾರ್ಮಿಕ ಗುಂಪುಗಳಲ್ಲಿ ಮುಸ್ಲಿಂ ಪದವೀಧರರ ಪ್ರಮಾಣವೇ ಅತಿ ಕಡಿಮೆ. ಶಾಲೆಗೆ ಹೋಗುವ ವಯೋಮಾನದ ಒಟ್ಟು ಮುಸ್ಲಿಂ ಮಕ್ಕಳಲ್ಲಿ ಮದರಸಾಗಳಿಗೆ ಹೋಗುತ್ತಿರುವವರು ಕೇವಲ ಶೇ. 3 ರಷ್ಟು ಮಕ್ಕಳು ಮಾತ್ರ. ಉರ್ದು ಕಲಿಸಲು ಇರುವ ಸೌಲಭ್ಯಗಳು ಬಲು ಕಡಿಮೆ. ಸರ್ಕಾರಿ/ಖಾಸಗಿ ಶಾಲೆಗಳಿಗೆ ಮಕ್ಕಳನ್ನು ಕಳಿಸಲು ಮುಸ್ಲಿಂ ತಂದೆ–ತಾಯಿ ಹಿಂಜರಿಯುತ್ತಿಲ್ಲ; ಅವರಿಗೆ ಈ ಶಾಲೆಗಳು ದುಬಾರಿಯಾಗಿವೆ. ಶಿಕ್ಷಕಕಿಯರ ಮತ್ತು ಹಾಸ್ಟೆಲ್‌ಗಳ ಕೊರತೆಯಿಂದಾಗಿ ಮುಸ್ಲಿಂ ಬಾಲಕಿಯರು ಶಿಕ್ಷಣದಲ್ಲಿ ಹಿಂದುಳಿದಿದ್ದಾರೆ. ಮುಸ್ಲಿಮರಲ್ಲಿ ಬಹಳಷ್ಟು ಜನರು ಸ್ವಂತ ಉದ್ಯೋಗದ ಕಡೆ ಆಕರ್ಷಿತರಾಗುತ್ತಿದ್ದಾರೆ; ಆದರೆ ಅವರಿಗೆ ತಾಂತ್ರಿಕ ಕೌಶಲ್ಯ, ತರಬೇತಿಯನ್ನು ಒದಗಿಸುವ ವ್ಯವಸ್ಥೆ ಇಲ್ಲ ಎಂಬುದನ್ನು ವರದಿಯು ದಾಖಲಿಸಿದೆ.

ಬೀಡಿ ಕಟ್ಟುವ, ಬಟ್ಟೆ ಹೊಲಿಯುವ ಮತ್ತು ಮೆಕ್ಯಾನಿಕ್ ವೃತ್ತಿಗಳಲ್ಲಿ ತೊಡಗಿರುವ ಮುಸ್ಲಿಮರಿಗೆ ಸಾಮಾಜಿಕ ಭದ್ರತೆಗಳಿಲ್ಲ. ಸ್ವ ಉದ್ಯೋಗದಲ್ಲಿ ಇರುವವರಿಗೆ ವೃತ್ತಿ ಕೌಶಲ್ಯ ಅಭಿವೃದ್ಧಿಗಾಗಿ ಯೋಜನೆ–ಕಾರ್ಯಕ್ರಮಗಳಿಲ್ಲ. ಮುಸ್ಲಿಮರಿಗೆ ಬ್ಯಾಂಕ್ ಸಾಲ ಸೌಲಭ್ಯ ಕಡಿಮೆ ಸಿಕ್ಕಿದೆ. ಗ್ರಾಮೀಣ ಮುಸ್ಲಿಮರು ಗರಿಷ್ಠವಾಗಿ ನಿರ್ಲಕ್ಷಿತರಾಗಿದ್ದಾರೆ. ಮುಸ್ಲಿಮರ ವೃತ್ತಿಗಳನ್ನು ಪರಿಗಣಿಸಿ ವಿಶೇಷ ಕಾರ್ಯಕ್ರಮ ಮತ್ತು ಯೋಜನೆಗಳನ್ನು ರೂಪಿಸಲಾಗಿಲ್ಲ. ಕೆಲವು ಬ್ಯಾಂಕುಗಳು, ಮುಸ್ಲಿಮರು ಗರಿಷ್ಠವಾಗಿ ವಾಸಿಸುತ್ತಿರುವ ಕೆಲವು ಪ್ರದೇಶಗಳನ್ನು ಗುರುತಿಸಿ, ಅಲ್ಲಿನ ಮುಸ್ಲಿಮರಿಗೆ ಸಾಲ ಸೌಲಭ್ಯಗಳನ್ನು ನಿರಾಕರಿಸಿವೆ. ಗ್ರಾಮೀಣ ಮುಸ್ಲಿಮರು ಶೈಕ್ಷಣಿಕ ಸೌಲಭ್ಯಗಳಿಂದ ಹೆಚ್ಚು ವಂಚಿತರಾಗಿದ್ದಾರೆ. ಮುಸ್ಲಿಮರು ಹೆಚ್ಚಿರುವ ಹಳ್ಳಿಗಳ ಮತ್ತು ನಗರಗಳ ಮೊಹಲ್ಲಾಗಳಿಗೆ ಪೌರ ಸೌಲಭ್ಯಗಳು ಒದಗಿಸಲ್ಪಟ್ಟಿಲ್ಲ. ಮುಸ್ಲಿಂ ಜನಸಂಖ್ಯೆ ಹೆಚ್ಚಿಗಿರುವ ರಾಜ್ಯಗಳಲ್ಲಿ ಮೂಲ ಸೌಲಭ್ಯಗಳು ದೊರಕಿಲ್ಲ. ಮುಸ್ಲಿಮರಲ್ಲಿ ಬಡತನದ ಪ್ರಮಾಣವು ನಗರಗಳಲ್ಲಿ ಜಾಸ್ತಿ. ಮುಸ್ಲಿಮರು ದಟ್ಟವಾಗಿ ವಾಸಿಸುವ ಪ್ರದೇಶಗಳಲ್ಲೂ ಇದು ಹೆಚ್ಚಿಗಿದೆ; ವಿರಳವಾಗಿ ವಾಸಿಸುವಲ್ಲಿ ಮುಸ್ಲಿಮರು ತುಲನಾತ್ಮಕವಾಗಿ ಹೆಚ್ಚಿನ ಶಿಕ್ಷಣ, ಆರೋಗ್ಯ, ಪೌರ ಸೌಲಭ್ಯಗಳನ್ನು ಪಡೆದಿದ್ದಾರೆ ಎಂಬುದನ್ನು ವರದಿಯಲ್ಲಿ ಅಂಕಿ–ಅಂಶಗಳೊಂದಿಗೆ ವಿವರಿಸಲಾಗಿದೆ.

ಮುಸ್ಲಿಮರು ಐ.ಪಿ.ಎಸ್. ನಲ್ಲಿ ಶೇ. 4 ರಷ್ಟು, ಐ.ಎ.ಎಸ್. ನಲ್ಲಿ ಶೇ. 3 ರಷ್ಟು ಮತ್ತು ಐ.ಎಫ್.ಎಸ್. ನಲ್ಲಿ ಶೇ. 1.8 ರಷ್ಟು ಪ್ರಾತಿನಿಧ್ಯವನ್ನು ಪಡೆದಿದ್ದಾರೆ. ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಮುಸ್ಲಿಮರ ಪ್ರಾತಿನಿಧ್ಯ ತುಂಬಾ ಕಡಿಮೆ ಇದೆ. ಬ್ಯಾಂಕ್-ವಿಶ್ವವಿದ್ಯಾಲಯಗಳಲ್ಲೂ ಇವರಿಗೆ ದೊರೆತಿರುವ ಪ್ರಾತಿನಿಧ್ಯ ಕನಿಷ್ಠವಾಗಿದೆ. ಪೋಲೀಸ್ ಹುದೆಗಳಲ್ಲಿ ಶೇ. 6 ರಷ್ಟು, ಆರೋಗ್ಯ ಇಲಾಖೆಯಲ್ಲಿ ಶೇ. 4 ರಷ್ಟು ಮತ್ತು ಸಾರಿಗೆ ಇಲಾಖೆಯಲ್ಲಿ ಶೇ. 6.5 ರಷ್ಟು ಪ್ರಾತಿನಿಧ್ಯ ಇವರಿಗೆ ಸಿಕ್ಕಿದೆ. ಭಾರತೀಯ ರೇಲ್ವೆ ಇಲಾಖೆಯಲ್ಲಿ ಮುಸ್ಲಿಮರು ಪಡೆದಿರುವ ಉದ್ಯೋಗಾವಕಾಶಗಳಲ್ಲಿ ಶೇ. 98 ರಷ್ಟು ತೀರಾ ಕೆಳದರ್ಜೆಯ ಉದ್ಯೋಗಗಳು.

ಅವರ ಜನಸಂಖ್ಯಾ ಪ್ರಮಾಣಕ್ಕೆ ಅನುಗುಣವಾದ ಪ್ರಮಾಣದಲ್ಲಿ ಮುಸ್ಲಿಮರಿಗೆ ಯಾವ ರಾಜ್ಯದಲ್ಲೂ ಉದ್ಯೋಗಾವಕಾಶಗಳು ದೊರಕಿಲ್ಲ. ಜನಸಂಪರ್ಕ ಬರುವ ಇಲಾಖೆ ಮತ್ತು ಹುದ್ದೆಗಳಲ್ಲಿ ಮುಸ್ಲಿಮರಿಗೆ ಪ್ರಾತಿನಿಧ್ಯ ಇಲ್ಲದಂತಾಗಿದೆ. ಸಮಗ್ರ ಶಿಶು ಅಭಿವೃದ್ಧಿ ಕಾರ್ಯಕ್ರಮಗಳ ಪ್ರಯೋಜನ ಅವರಿಗೆ ದೊರಕಿಲ್ಲ. ಚುನಾಯಿತ ಸದಸ್ಯರಿರುವ ಸಂಸ್ಥೆಗಳಲ್ಲಿ ಮುಸ್ಲಿಮರ ಪ್ರಾತಿನಿಧ್ಯ ಕಡಿಮೆ ಎಂದು ವರದಿ ದಾಖಲಿಸಿದೆ.

ಅವಕಾಶಗಳನ್ನು ಪಡೆಯುವಲ್ಲಿ ಸಮಾನತೆ, ನಂಬಿಕೆಯ ಸ್ವಾತಂತ್ರ್ಯ, ಧರ್ಮ-ಜಾತಿ ಮತ್ತಿತರ ಆಧಾರದ ತಾರತಮ್ಯದಿಂದ ನಾಗರಿಕರ ರಕ್ಷಣೆಯನ್ನು ಖಾತ್ರಿಪಡಿಸುವ ಸಂವಿಧಾನದ ಪರಿಚ್ಛೇದಗಳಾದ 14, 15, 16 ಮತ್ತು 25ರ ಆಶಯಕ್ಕೆ 1950ರ ರಾಷ್ಟ್ರಪತಿ ಆದೇಶ ವಿರೋಧವಾಗಿದೆ. ಹಿಂದೂ ಧರ್ಮೀಯ ಇತರ ಹಿಂದುಳಿದ ಜಾತಿಗಳಿಗಿಂತ ಮುಸ್ಲಿಂ ಧರ್ಮೀಯ ಇತರ ಹಿಂದುಳಿದ ಜಾತಿಗಳ ಸ್ಥಿತಿ ಶೋಚನೀಯವಾಗಿದೆ. ಸರ್ಕಾರಿ ಇಲಾಖೆಗಳಲ್ಲಿ ಶೇ. 11 ರಷ್ಟು ಹುದ್ದೆಗಳು ಹಿಂದೂ ಧರ್ಮೀಯ ಇತರ ಹಿಂದುಳಿದ ಜಾತಿಗಳಿಗೆ ಸಿಕ್ಕಿದ್ದರೆ, ಶೇ. 4 ರಷ್ಟು ಹುದ್ದೆಗಳು ಒಟ್ಟು ಮುಸ್ಲಿಮರಿಗೆ ಸಿಕ್ಕಿದ್ದು, ಈ ಪೈಕಿ ಶೇ. 1 ರಷ್ಟು ಹುದ್ದೆಗಳು ಮುಸ್ಲಿಂ ಧರ್ಮೀಯ ಇತರ ಹಿಂದುಳಿದ ಜಾತಿಗಳವರಿಗೆ ಸಿಕ್ಕಿವೆ; ದಲಿತ ಮುಸ್ಲಿಮರಿಗಂತೂ ತೀರಾ ಕಡಿಮೆ ಹುದ್ದೆಗಳು ದೊರಕಿವೆ. ದೇಶದ ರಾಷ್ಟ್ರೀಯ ತಲಾದಾಯ ಮತ್ತು ತಲಾ ವೆಚ್ಚಕ್ಕಿಂತ ಮುಸ್ಲಿಮರ ರಾಷ್ಟ್ರೀಯ ತಲಾದಾಯ ಮತ್ತು ತಲಾ ವೆಚ್ಚ ತುಂಬಾ ಕಡಿಮೆ ಇದೆ. ಹಿಂದೂ ಧರ್ಮೀಯ ಇತರ ಹಿಂದುಳಿದ ಜಾತಿಗಳಿಗೆ ನಿಗದಿಪಡಿಸಿರುವ ಅವಕಾಶಗಳಲ್ಲಿ ಮುಸ್ಲಿಂ ಧರ್ಮೀಯ ಇತರ ಹಿಂದುಳಿದ ಜಾತಿಗಳಿಗೆ ಸಿಗಬೇಕಾದ ಅವಕಾಶಗಳು ಸಿಕ್ಕಿಲ್ಲ. ಒಟ್ಟಾರೆ, ಹಿಂದೂ ಧರ್ಮೀಯ ಇತರ ಹಿಂದುಳಿದ ಜಾತಿಗಳಿಗಿಂತ ಮುಸ್ಲಿಮರ ಸ್ಥಿತಿಯು ಶೋಚನೀಯವಾಗಿದೆ. ಮುಸ್ಲಿಂ ಧರ್ಮೀಯ ಇತರ ಹಿಂದುಳಿದ ಜಾತಿಗಳವರ ಮತ್ತು ದಲಿತರ ಸ್ಥಿತಿಗತಿಯು ಇನ್ನೂ ಶೋಚನೀಯವಾಗಿದೆ ಎಂಬುದನ್ನು ವರದಿ ಬಯಲಾಗಿಸಿದೆ.

ದೇಶದಲ್ಲಿ ಒಟ್ಟು 5 ಲಕ್ಷ ನೋಂದಾಯಿತ ವಕ್ಫ್‌ಗಳಿವೆ; ಇವುಗಳ ಬಳಿ ಒಟ್ಟು 6 ಲಕ್ಷ ಎಕರೆ ಭೂಮಿ ಇದೆ.; ಇದರ ಬುಕ್ ಮೌಲ್ಯ ಸುಮಾರು ರೂ. 6000 ಕೋಟಿ; ಆದರೆ ಇವುಗಳಿಂದ ಬರುತ್ತಿರುವ ಆದಾಯ ಕೇವಲ ವಾರ್ಷಿಕ ರೂ. 163 ಕೋಟಿ (ಅಂದರೆ ಶೇ. 2.7 ರಷ್ಟು). ವಕ್ಫ್ ಆಸ್ತಿಯ ಅಸಮರ್ಪಕ ನಿರ್ವಹಣೆಗೆ ರಾಜ್ಯ ವಕ್ಫ್ ಮಂಡಳಿ ಮತ್ತು ಕೇಂದ್ರ ವಕ್ಫ್ ಪರಿಷತ್‌ಗಳು ಸಶಕ್ತವಾಗಿಲ್ಲದಿರುವುದು ಕಾರಣ. ಬಹುತೇಕ ಕಡೆ ವಕ್ಫ್ ಆಸ್ತಿಯನ್ನು ಸರ್ಕಾರವೇ ಅತಿಕ್ರಮಿಸಿದೆ. ತಮ್ಮ ಧ್ಯೇಯೋದ್ದೇಶಗಳನ್ನು ಈಡೇರಿಸಿಕೊಳ್ಳುವಲ್ಲಿ ವಕ್ಫ್‌ಗಳು ಯಶಸ್ವಿ ಆಗಿಲ್ಲದಿರುವುದಕ್ಕೆ ರಾಜ್ಯ ಸರ್ಕಾರಗಳ ನಿರಾಸಕ್ತಿ ಮತ್ತು ಮುಸ್ಲಿಂ ವಿರೋಧಿ ನೀತಿಯೇ ಕಾರಣವಾಗಿದೆ. ವಕ್ಫ್ ಜಮೀನನ್ನು ಸ್ವಾಧೀನಪಡಿಸಿಕೊಂಡ ಪ್ರಕರಣಗಳಲ್ಲಿ ಸರ್ಕಾರವು ಪರಿಹಾರಧನವನ್ನು ನೀಡಿರುವುದಿಲ್ಲ ಎಂದಿರುವ ವರದಿಯು, ವಕ್ಫ್ ಆಸ್ತಿಯ ಸಮರ್ಪಕ ನಿರ್ವಹಣೆಗೆ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಆದ್ಯತೆಯನ್ನು ನೀಡಬೇಕು. ರಾಜ್ಯ ವಕ್ಫ್ ಮಂಡಳಿಗಳ ಅಧ್ಯಕ್ಷ ಮತ್ತು ಸದಸ್ಯರ ಸ್ಥಾನಕ್ಕೆ ನಿಷ್ಠಾವಂತ ಮುಸ್ಲಿಮರು ನೇಮಕಗೊಳ್ಳಬೇಕು. ಈ ಮಂಡಳಿಗಳಿಗೆ ಇಸ್ಲಾಮಿಕ್ ಕಾಯಿದೆ, ರೀತಿ-ರಿವಾಜುಗಳಲ್ಲಿ ಪರಿಣತರಿರುವವರನ್ನೇ ಅಧಿಕಾರಿಗಳನ್ನಾಗಿ ನೇಮಕ ಮಾಡಬೇಕು. ರಾಷ್ಟ್ರೀಯ ಮಟ್ಟದಲ್ಲಿ ಮತ್ತು ರಾಜ್ಯಗಳಲ್ಲಿ ವಕ್ಫ್ ಅಭಿವೃದ್ಧಿ ನಿಗಮಗಳು ರಚನೆಯಾಗಬೇಕು. ಶಿಕ್ಷಣ-ಆರೋಗ್ಯ ಸೌಲಭ್ಯಗಳ ಪೂರೈಕೆ ಹಾಗೂ ಇತರ ಸೇವಾ ಚಟುವಟಿಕೆಗಳನ್ನು ನಡೆಸುತ್ತಿರುವ ನೋಂದಾಯಿತ ಸಂಸ್ಥೆಗಳಿಗೆ ವಕ್ಫ್ ಆಸ್ತಿಯನ್ನು ಲೀಸ್‌ಗೆ ಕೊಡುವ ಅವಧಿಯನ್ನು ಹೆಚ್ಚಿಸಬೇಕು. ವಕ್ಫ್ ಆಸ್ತಿಯನ್ನು ಭೂಸ್ವಾಧೀನ ಕಾಯ್ದೆ ಹಾಗೂ ಬಾಡಿಗೆ ನಿಯಂತ್ರಣ ಕಾಯ್ದೆಗಳಿಂದ ವಿನಾಯಿತಿ ನೀಡಬೇಕು. ವಕ್ಫ್ ನ್ಯಾಯ ಮಂಡಳಿಗೆ ಪೂರ್ಣಾವಧಿ ಅಧ್ಯಕ್ಷರನ್ನು ನೇಮಿಸಬೇಕು. ವಕ್ಫ್ ಆಸ್ತಿ ಅತಿಕ್ರಮಿಸಿದವರಿಗೆ ಸಾರ್ವಜನಿಕ ಸ್ಥಳ ತೆರವು ಕಾಯ್ದೆಯನ್ನು ಅನ್ವಯಿಸಿ, ವಕ್ಫ್ ಆಸ್ತಿಯನ್ನು ತೆರವುಗೊಳಿಸಬೇಕು ಎಂದು ಸಮಿತಿ ಸಲಹೆ ಮಾಡಿದೆ. ಅಲ್ಲದೆ, ಕೇಂದ್ರ-ರಾಜ್ಯ ಸರ್ಕಾರಗಳ ಮತ್ತು ಸಂವಿಧಾನಬದ್ಧ ಸಂಸ್ಥೆಗಳ ವೈಫಲ್ಯವು ಮುಸ್ಲಿಮರಲ್ಲಿ ಅಸಮಾಧಾನವನ್ನು ಹೆಚ್ಚಿಸಿದ್ದು, ಸರ್ಕಾರ ಇದನ್ನು ಪರಿಹರಿಸಬೇಕಾಗಿದೆ ಎಂದು ಎಚ್ಚರಿಕೆಯನ್ನೂ ಸಮಿತಿಯು ನೀಡಿದೆ.

ಇತರ ಪಕ್ಷಗಳ ಜಾತ್ಯತೀತತೆಯು 'ನಕಲಿ (psudeo) ಎಂದು, ಮುಸ್ಲಿಮರ ವಿಚಾರದಲ್ಲಿ ಇವು ತುಷ್ಟೀಕರಣ ನೀತಿ ಅನುಸರಿಸುತ್ತಿವೆ ಎಂದು, ಮುಸ್ಲಿಮರು ರಾಷ್ಟ್ರವಿರೋಧಿ ಎಂದು ಹಿಂದೂತ್ವವಾದಿ ಶಕ್ತಿಗಳು ಹಾಗೂ ಬಿಜೆಪಿ ಆಪಾದಿಸುತ್ತಾ ಬರುತ್ತಿವೆ. ಈ ರೀತಿಯ ನಿರಾಧಾರದ ಪ್ರಚಾರ 1980ರಿಂದ ವ್ಯವಸ್ಥಿತವಾಗಿ ನಡೆದಿದೆ. ಆಯೋಧ್ಯೆಯಲ್ಲಿ ಬಾಬರಿ ಮಸೀದಿ ಧ್ವಂಸದ ನಂತರ, ಹಿಂದೂತ್ವವಾದಿ ರಾಜಕೀಯ ಶಕ್ತಿಗಳು, ಮುಸ್ಲಿಂ ಜಾಗತಿಕ ಭಯೋತ್ಪಾದನೆಯ ಆರೋಪಗಳು ಕೇಳಿ ಬರುತ್ತವೆ.

ಮುಸ್ಲಿಮರನ್ನು ಓಲೈಸಲಾಗುತ್ತಿದೆ ಎಂದು ಆರೋಪಿಸಲಾಗುತ್ತಿದೆ. ಈ ಆರೋಪದಲ್ಲಿ ಸತ್ಯ ಇರುವುದಾದಲ್ಲಿ ಮುಸ್ಲಿಮರ ಸ್ಥಿತಿಗತಿ ಎಷ್ಟೋ ಉತ್ತಮವಾಗಿರಬೇಕಿತ್ತು. ಆದರೆ ವಾಸ್ತವವಾಗಿ ಅಭಿವೃದ್ಧಿ/ಪ್ರಗತಿಯ ಎಲ್ಲಾ ಪ್ರಯೋಜನಗಳಿಂದ ಮುಸ್ಲಿಮರು ವಂಚಿತರಾಗಿದ್ದಾರೆ; ಪ.ಜಾತಿ/ ಪಂಗಡಗಳವರಿಗಿಂತ ಮುಸ್ಲಿಮರ ಸ್ಥಿತಿಗತಿ ತುಸುಮಾತ್ರ ಮೇಲ್ಮಟ್ಟದಲ್ಲಿದೆ; ಆದರೆ ಅದು OBC ಗಳವರಿಗಿಂತ ಕನಿಷ್ಠ ಮಟ್ಟದಲ್ಲಿದೆ. 'ಭಯೋತ್ಪಾದಕರು: ದೇಶದ್ರೋಹಿಗಳು'ಎಂದು ಮುಸ್ಲಿಮರು ಟೀಕೆಗೆ ತುತ್ತಾಗುತ್ತಿದ್ದಾರೆ. ತಾವು ದೇಶದ್ರೋಹಿಗಳಲ್ಲ ಹಾಗೂ ಭಯೋತ್ಪಾದಕರಲ್ಲ ಎಂಬುದನ್ನು ಪ್ರತಿ ದಿನವೂ ಸಾಬೀತುಪಡಿಸಿ ತೋರಿಸಲು ಮುಸ್ಲಿಮರು ಬಲಾತ್ಕರಿಸಲ್ಪಡುತ್ತಿದ್ದಾರೆ.

ಧಾರ್ಮಿಕ ಅಲ್ಪಸಂಖ್ಯಾತರಲ್ಲಿ ಮುಸ್ಲಿಮರು ಗರಿಷ್ಠ ಸಂಖ್ಯೆಯಲ್ಲಿದ್ದಾರೆ. ಆದರೂ ಸ್ವಾತಂತ್ರ್ಯ ಬಂದ 60 ವರ್ಷಗಳಲ್ಲಿ ಆಡಳಿತದಲ್ಲಿ ಅವರಿಗೆ ಸೂಕ್ತ ಪ್ರಾತಿನಿಧ್ಯ ಸಿಕ್ಕಿಲ್ಲ; ಸಮಸ್ತ ಸಮುದಾಯಗಳಿಗೆ ಅವಕಾಶ ಒದಗಿಸುವ ಪಾಲುದಾರಿಕೆಯ ಪ್ರಜಾಪ್ರಭುತ್ವ ನಮ್ಮದಾಗಬೇಕಿದೆ. ಶೇ. 13.4 ರಷ್ಟು ಜನಸಂಖ್ಯಾ ಪ್ರಮಾಣ ಇರುವ ಮುಸ್ಲಿಮರಿಗೆ ಸರ್ಕಾರಿ ಹುದ್ದೆಗಳಲ್ಲಿ ಹಾಗೂ ಆಡಳಿತದಲ್ಲಿ ಸಿಕ್ಕಿರುವುದು ಕೇವಲ ಶೇ. 4.9 ರಷ್ಟು ಪ್ರಾತಿನಿಧ್ಯ ಮಾತ್ರ.

ರಾಜ್ಯಗಳಲ್ಲಿ ಮುಸ್ಲಿಮರಿಗೆ ದೊರೆತ ಪ್ರಾತಿನಿಧ್ಯ ಕೂಡ ಇದಕ್ಕಿಂತ ಉತ್ತಮವಿಲ್ಲ. ಅಸ್ಸಾಂ, ಪ.ಬಂಗಾಲ ಮತ್ತು ಉ.ಪ್ರದೇಶಗಳಲ್ಲಿ ಮುಸ್ಲಿಮರ ಜನಸಂಖ್ಯಾ ಪ್ರಮಾಣ ಕ್ರಮವಾಗಿ 30.9%, 25% ಮತ್ತು 18.5% ರಷ್ಟು ಇದೆ. ಆದರೆ ಈ ರಾಜ್ಯಗಳಲ್ಲಿ ಸರ್ಕಾರಿ ಹುದ್ದೆಗಳಲ್ಲಿ ಅವರಿಗೆ ದೊರೆತ ಪ್ರಮಾಣ ಕ್ರಮವಾಗಿ 10.9, 4.7 ಮತ್ತು 7.5 ರಷ್ಟು ಮಾತ್ರ.

ಶೈಕ್ಷಣಿಕ ಸೌಲಭ್ಯಗಳಿಂದಲೂ ಮುಸ್ಲಿಮರು ವಂಚಿತರಾಗಿದ್ದಾರೆ; ಉನ್ನತ ಶಿಕ್ಷಣವಂತೂ ಇವರಿಗೆ ಗಗನಕುಸುಮವಾಗಿದೆ; ಪದವೀಧರರ ಪ್ರಮಾಣ ಮುಸ್ಲಿಮರಲ್ಲಿ 3.4% ಮಾತ್ರ ಇದೆ. ಹಿಂದೂಗಳಲ್ಲಿ 15.3 ರಷ್ಟು ಇದೆ. ಸಾಕ್ಷರತೆ ಪ್ರಮಾಣವೂ ಮುಸ್ಲಿಮರಲ್ಲಿ ಕಡಿಮೆ; ಸಾಕ್ಷರತೆಯ ರಾಷ್ಟ್ರೀಯ ಸರಾಸರಿ ಪ್ರಮಾಣ ಶೇ. 65.1 ಇರುವಾಗ ಮುಸ್ಲಿಮರದು 49.1 ಇದೆ.

ನಗರ ಪ್ರದೇಶದಲ್ಲಿ ಪ್ರಾಥಮಿಕ ಶಾಲೆಗೆ ಶೇ. 95% ರಷ್ಟು OBC/SC/ST ಯೇತರ ಸಮುದಾಯಗಳ ಮಕ್ಕಳು, ಶೇ. 90 ರಷ್ಟು SC/ST ಮಕ್ಕಳು ಪ್ರವೇಶವನ್ನು ಪಡೆದರೆ, ಮಿನಿ ಪಾಕಿಸ್ತಾನಗಳು ಎಂದು ಬಿಂಬಿಸಲ್ಪಟ್ಟ, ನಗರದ ಸ್ಲಂಗಳಲ್ಲಿ ಮುಸ್ಲಿಮರಲ್ಲಿ ಶೇ. 80 ರಷ್ಟು ಮಕ್ಕಳು ಮಾತ್ರ ಪ್ರವೇಶ ಪಡೆಯುತ್ತಾರೆ. ಬಹುಪಾಲು ಮುಸ್ಲಿಂ

ಮಕ್ಕಳಿಗೆ ಮದರಸಾಗಳಲ್ಲಿ ಶಿಕ್ಷಣ ನೀಡಲಾಗುತ್ತದೆ ಎಂಬ ಹಿಂದುತ್ವವಾದಿಗಳ ಆರೋಪದಲ್ಲಿ ಹುರುಳಿಲ್ಲ; ರಾಜೇಂದರ್ ಸಾಚಾರ್ ಸಮಿತಿಯು ದೇಶಾದ್ಯಂತ ಸಂಗ್ರಹಿಸಲಾದ ಅಂಕಿ-ಅಂಶಗಳಲ್ಲಿ, ಶೇ. 3 ರಿಂದ 4 ರಷ್ಟು ಮುಸ್ಲಿಂ ಮಕ್ಕಳು ಮಾತ್ರ ಮದರಸಾಗಳಲ್ಲಿ ಶಿಕ್ಷಣ ಪಡೆಯುತ್ತಾರೆ ಎಂಬುದು ಮತ್ತು ತಮ್ಮ ಮಕ್ಕಳನ್ನು ಸಾಮಾನ್ಯ ಶಾಲೆಗಳಿಗೆ ಕಳಿಸುವ ಉದ್ದೇಶವೇ ಮುಸ್ಲಿಮರಲ್ಲಿರುವುದು ವ್ಯಕ್ತವಾಗಿದೆ. ಕರ್ನಾಟಕ ಮದ್ರಾಸುಗಳು ಭಯೋತ್ಪಾದನಾ ಕೇಂದ್ರಗಳೆಂದು ಹೇಳಿಕೆ ನೀಡುವ ರಾಜಕಾರಣಿಗಳು ಇದನ್ನು ಗಮನಿಸಬೇಕು.

ಶಿಕ್ಷಣ ಮತ್ತು ಉದ್ಯೋಗದಿಂದ ವಂಚಿತವಾಗಿರುವ ಸಮುದಾಯ ಬಡತನಕ್ಕೆ ಸಿಲುಕುವುದು ಸಹಜ. ಗ್ರಾಮೀಣ ಪ್ರದೇಶದಲ್ಲಿ ಮುಸ್ಲಿಮರಲ್ಲಿ ತಲೆ ಎಣಿಕೆ ಅನುಪಾತ (Head Count Ratio-HCR) ಶೇ. 31 ರಷ್ಟು ದಾಖಲಾಗಿದ್ದು, ಬಡತನಕ್ಕೆ ಸಿಲುಕಿದ ಎರಡನೇ ಸಮುದಾಯ ಮುಸ್ಲಿಮರದ್ದಾಗಿದೆ. (ಮೊದಲನೆಯದು SC/ST ಸಮುದಾಯ; ಇಲ್ಲಿ HCR ಅನುಪಾತ ಶೇ. 35 ರಷ್ಟಿದೆ). ಇನ್ನು ನಗರ ಪ್ರದೇಶದಲ್ಲಿ ಈ ಅನುಪಾತದ ಪ್ರಮಾಣ ಕ್ರಮವಾಗಿ 38.4% ಮತ್ತು 36.4% ಇದ್ದು, SC/ST ಗಿಂತ ಮುಸ್ಲಿಮರೇ ಹೆಚ್ಚು ಬಡವರಾಗಿದ್ದಾರೆ.

ಭೂ ಒಡೆತನ ಹೊಂದಿರುವ ಪ್ರಮಾಣವು ಇತರ ಧಾರ್ಮಿಕ ಸಮುದಾಯಗಳವರಿಗಿಂತ ಮುಸ್ಲಿಮರರಲ್ಲಿ ಅತಿ ಕಡಿಮೆ ಇರುವುದೂ ವ್ಯಕ್ತವಾಗಿದೆ. 2001 ರ ಜನಗಣತಿ ಮತ್ತು National Sample Survey Organisation-NSSO ನಡೆಸಿದ 61ನೇ ಸುತ್ತಿನ ಸಮೀಕ್ಷೆ ತಿಳಿಸುವಂತೆ, ಪಕ್ಕಾ ಮನೆಗಳಲ್ಲಿ ವಾಸಿಸುತ್ತಿರುವ ಮುಸ್ಲಿಮರ ಪ್ರಮಾಣ ಮತ್ತು ಮನೆಗಳಿಗೆ ವಿದ್ಯುದ್ದೀಪ ಪಡೆದಿರುವ ಮುಸ್ಲಿಮರ ಪ್ರಮಾಣ ದೇಶದ ಸರಾಸರಿಗಿಂತ ತುಂಬಾ ಕಡಿಮೆಯಿದೆ. ದೇಶದಲ್ಲಿ ಪೈಪ್ ಮೂಲಕ ಕುಡಿಯುವ ನೀರನ್ನು ಪಡೆಯುತ್ತಿರುವ ಜನಸಂಖ್ಯೆಯ ಪ್ರಮಾಣ ಶೇ. 25 ರಷ್ಟಿದೆ; ಆದರೆ ಹೀಗೆ ನೀರು ಪಡೆಯುತ್ತಿರುವ ಮುಸ್ಲಿಮರ ಪ್ರಮಾಣ ಕೇವಲ ಶೇ. 10 ರಷ್ಟು. ಸ್ವತಂತ್ರ ಭಾರತದ ಮುಸ್ಲಿಂ ಸಮುದಾಯಗಳ ದಿಕ್ಕು ದೆಸೆಯನ್ನು ಧಾರ್ಮಿಕ ಹಾಗೂ ರಾಜಕೀಯ ನಾಯಕತ್ವ ನೀಡುತ್ತಿತ್ತು. ಮಂಡಲ್ ವರದಿಯ ಜಾರಿ ನಂತರ ಮುಸ್ಲಿಂರ ರಾಜಕೀಯ ನಾಯಕತ್ವ ಒಂದು ಸ್ಪಷ್ಟ ಸ್ವರೂಪದಲ್ಲಿ ಬೆಳೆಯಿತು. ಬಾಬ್ರಿಮಸೀದಿಯ ಧ್ವಂಸದ ನೆಪದಲ್ಲಿ 11 ಸಾವಿರ ಜನ ದಲಿತ, ಹಿಂದುಳಿದ ಹಾಗೂ ಮುಸ್ಲಿಂರ ಕಗ್ಗೊಲೆಯ ನಂತರ ರಾಷ್ಟ್ರ ರಾಜಕಾರಣದಲ್ಲಿ ಮುಸ್ಲಿಂ ರಾಜಕೀಯ ನಾಯಕತ್ವ ಏಕಾಂಗಿಯಾಯಿತು. ಅಂದು ಬ್ರಾಹ್ಮಣೇತರ ಶೂದ್ರ ನಾಯಕತ್ವಕ್ಕೆ ಸಿಕ್ಕಷ್ಟು ಮನ್ನಣೆ ಮುಸ್ಲಿಂ ರಾಜಕೀಯ ನಾಯಕತ್ವಕ್ಕೆ ದೊರಕಲಿಲ್ಲ. ಆದರೆ ವರ್ತಮಾನದ ರಾಜಕೀಯ ಸಂದರ್ಭದಲ್ಲಿ ಪ್ರಾತಿನಿಧ್ಯತೆ ದೊರೆಯಲಿಲ್ಲ ಎಂಬುದು ಹೆಚ್ಚಿನ ಮುಸ್ಲಿಂರಲ್ಲಿ ಅಸಮಾಧಾನವನ್ನು ಹೆಚ್ಚಿದೆ.

2004ರ ಚುನಾವಣೆ ಒಟ್ಟು 543 ಲೋಕಸಭಾ ಸದಸ್ಯರಲ್ಲಿ ಮುಸ್ಲಿಮರು ಕೇವಲ 33 ಸದಸ್ಯರು ರಾಜ್ಯ ಸಭೆಯಲ್ಲಿ 25 ಜನ ಸದಸ್ಯರಿರುವುದು ಹಾಗೂ ಕರ್ನಾಟಕ 2004ರ ವಿಧಾನಸಭಾ ಚುನಾವಣೆಯಲ್ಲಿ ಮುಸ್ಲಿಮರು ಕೇವಲ 7 ಜನ ವಿಧಾನಸಭಾ ಸದಸ್ಯರು, 6 ಜನ ವಿಧಾನಪರಿಷತ್ ಸದಸ್ಯರು ಮಾತ್ರ ಇರುವುದು ನಾಚಿಕೆಗೇಡಿನ ವಿಷಯವಾಗಿದೆ ಮತ್ತೆ 2008ರಲ್ಲಿ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ವಿಧಾನಸಭಾ ಸದಸ್ಯರ ಸಂಖ್ಯೆ 8ಕ್ಕೆ ಏರಿದೆ.

ಯಾವುದೇ ಸಮುದಾಯದ ಅನ್ಯಾಯ, ಅವಕಾಶ ಹೀನತೆಗೆ ಗುರಿಯಾಗುವುದು ಅಮಾನುಷ. ಉಳ್ಳ ಅವಕಾಶ ಮತ್ತು ಸಂಪನ್ಮೂಲಗಳನ್ನು ಎಲ್ಲಾ ಸಮುದಾಯಗಳಿಗೆ ಅವುಗಳ ಜನಸಂಖ್ಯಾ ಪ್ರಮಾಣಕ್ಕೆ ಅನುಗುಣವಾಗಿ ಹಂಚಿಕೆಯಾಗುವುದು ಅತ್ಯಗತ್ಯ. ಪ್ರತಿಯೊಂದು ಸಮುದಾಯಕ್ಕೆ ಅದರ ಜನಸಂಖ್ಯೆ ಪ್ರಮಾಣದಷ್ಟು ಪ್ರಾತಿನಿಧ್ಯವು ಎಲ್ಲಾ ಕ್ಷೇತ್ರಗಳಲ್ಲಿ ದೊರಕದಿದ್ದರೆ ಅದು ಪ್ರಜಾಪ್ರಭುತ್ವದ ವಿರೋಧಿ, ಸಾಮಾಜಿಕ ನ್ಯಾಯದ ವಿರೋಧಿ ತತ್ವವಾಗಿರುತ್ತದೆ.

ಕಳೆದ 60 ವರ್ಷಗಳ ಎಲ್ಲಾ ಮುಸ್ಲಿಂ ಸಮುದಾಯಗಳ ಕೇಂದ್ರಿತ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಚಳುವಳಿಗಳು ಅಂತಿಮವಾಗಿ ರಾಜಕೀಯ ಸ್ಪಷ್ಟ ನಿಲುವು ಪಡೆಯುತ್ತಿರುವುದು ಮುಂಬರುವ ದಿನಗಳಲ್ಲಿ ಮುಸ್ಲಿಂರ ರಾಜಕೀಯ ಪಾಲುದಾರಿಕೆಯ ಹೋರಾಟದ ಮುನ್ಸೂಚನೆಗಳಾಗಿವೆ ಎಂಬುದನ್ನು ಎರಡನೇ ಹಂತದ ಮುಸ್ಲಿಂ ರಾಜಕೀಯ ನಾಯಕತ್ವವು ಮನಗಾಣಬೇಕಿದೆ.

ಜಸ್ಟಿಸ್ ರಾಜೆಂದರ್ ಸಾಚಾರ್ ಸಮಿತಿ, ನಡೆಸಿದ ವಿಶೇಷ ಅಧ್ಯಯನ "SC ಜನಸಂಖ್ಯಾ ಪ್ರಮಾಣ ಹೆಚ್ಚಿರುವ ಮತಕ್ಷೇತ್ರಗಳನ್ನು SC ಮತಕ್ಷೇತ್ರಗಳು ಎಂದು ಮೀಸಲಿರಿಸುವುದು ಸೂಕ್ತ; ಆದರೆ ಮುಸ್ಲಿಂ ಜನಸಂಖ್ಯಾ ಪ್ರಮಾಣ ಹೆಚ್ಚಿರುವ ಮತ ಕ್ಷೇತ್ರಗಳನ್ನು SC ಮತಕ್ಷೇತ್ರಗಳು ಎಂದು ಮೀಸಲಿರಿಸಲಾಗಿದೆ. ಈ ವರಸೆ ಅನ್ಯಾಯ; ಇದರಿಂದ SC ಸಮುದಾಯಗಳವರಿಗೂ ಅನ್ಯಾಯವಾಗುತ್ತದೆ; ಮುಸ್ಲಿಮರಿಗೂ ಅನ್ಯಾಯವಾಗುತ್ತದೆ" ಎಂದು ದಾಖಲಿಸಿ, ಮತ ಕ್ಷೇತ್ರ ಮರುವಿಂಗಡಣಾ ಸಮಿತಿ ಈ ಬಗ್ಗೆ ಗಮನಹರಿಸುವ ಮೂಲಕ, ಸಾಮಾಜಿಕವಾಗಿ, ಆರ್ಥಿಕ, ರಾಜಕೀಯವಾಗಿ ಹಿಂದುಳಿದ ಮುಸ್ಲಿಂರನ್ನು 'ಎಸ್‌ಸಿ ಮುಸ್ಲಿಂ ಸಮುದಾಯ' ಗಳೆಂದು ಗುರುತಿಸಿ ಅವರಿಗೆ ರಾಜಕೀಯ ಮೀಸಲಾತಿ ಕಲ್ಪಿಸಬೇಕಿದೆ.

ಮುಸ್ಲಿಮರೊಳಗೆ ಸಾಮಾಜಿಕ, ಆರ್ಥಿಕ ತಾರತಮ್ಯ ತೀಕ್ಷ್ಣವಾಗಿದೆ; ಪ.ಜಾತಿಯವರ ವೃತ್ತಿಗಳನ್ನು ಮಾಡುತ್ತಿರುವ ಮುಸ್ಲಿಮರು 'ಅರ್ಜಲ್' ಎಂದು ಗುರುತಿಸಲ್ಪಟ್ಟಿದ್ದಾರೆ. ಇವರು ಆರ್ಥಿಕ ಮತ್ತು ರಾಜಕೀಯ ಬಲವಿಲ್ಲದವರಾಗಿದ್ದು,

ಸಾಮಾಜಿಕವಾಗಿ ಅತ್ಯಂತ ಕೆಳಸ್ಥಾನದಲ್ಲಿದ್ದಾರೆ. ಹಿಂದೂ OBC ಗಳವರು ಮಾಡುತ್ತಿರುವ ವೃತ್ತಿಗಳನ್ನು ಮಾಡುತ್ತಿರುವ ಮುಸ್ಲಿಮರು 'ಅಜ್ಲಫ್' ಎಂದು ಗುರುತಿಸಲ್ಪಟ್ಟಿದ್ದಾರೆ. ಇವರು ಸಂಖ್ಯೆಯಲ್ಲಿ ಹೆಚ್ಚಿದ್ದಾರೆ. 'ಅಶ್ರಫ್' ಎಂದು ಗುರುತಿಸಲ್ಪಡುವ ಮುಸ್ಲಿಮರು ಎಲ್ಲಾ ರೀತಿಯಲ್ಲಿ ಮುಂದುವರೆದವರಾಗಿದ್ದು, ಇವರು ಹಿಂದೂ ಮೇಲ್ಜಾತಿ ಅಥವಾ ವಿದೇಶಿ ಮೂಲದವರೆಂದು ಪರಿಗಣಿಸಲ್ಪಟ್ಟಿದ್ದಾರೆ.

'ಅರ್ಜಾಲ್' ಮುಸ್ಲಿಮರು ಅಸ್ಪೃಶ್ಯ ಮೂಲದವರಿದ್ದು, ಅಸ್ಪೃಶ್ಯರು ಅವಲಂಬಿಸಿರುವ ವೃತ್ತಿಗಳನ್ನೇ ಇವರು ಅವಲಂಬಿಸಿದ್ದು, ತಮ್ಮ ಸಮುದಾಯದಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಅವಕಾಶಹೀನತೆಗೆ ಬಲಿಯಾಗಿರುವ ಹಿನ್ನೆಲೆಯಲ್ಲಿ, ಇವರನ್ನು SC ಪಟ್ಟಿ ಒಳಗೆ ಸೇರಿಸುವುದು ಸೂಕ್ತ; ಇದು ಆಗದಿದ್ದರೆ OBC ಯಿಂದ ಪ್ರತ್ಯೇಕಿಸಿ, Most Bakward Classes-MBC ಪಟ್ಟಿಗಾದರೂ ಸೇರಿಸಿ, ಅವರಿಗೆ ಖಅ ಗಳಿಗೆ ಸಿಗುವ ಅನುಕೂಲತೆಗಳನ್ನು ಒದಗಿಸುವುದು ಸೂಕ್ತ; ಇವರನ್ನು 'ಅಜ್ಲಫ್' ಅಥವಾ 'ಅಶ್ರಫ್' ಮುಸ್ಲಿಮರ ಜೊತೆಗೆ ಸೇರಿಸುವುದು ಅನ್ಯಾಯ; 1950ರ ಪ. ಜಾತಿ ಆದೇಶವು, ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳಿಗೆ ಮತಾಂತರಗೊಂಡ ಹಿಂದೂ ಅಸ್ಪೃಶ್ಯರನ್ನು ಮೀಸಲಾತಿ ಕಕ್ಷೆಯಿಂದ ಹೊರಗಿಟ್ಟಿದ್ದು, ಅವಕಾಶಹೀನತೆಯನ್ನು ತೊಡೆದು ಹಾಕಲು ಧರ್ಮ ಅಡ್ಡಿಯಾಗಬಾರದು ಎಂಬ ಸಾಮಾಜಿಕ ನ್ಯಾಯದ ತತ್ವದ ಆದೇಶದ ಮೇಲೆ ಈ ಆದೇಶಕ್ಕೆ ತಿದ್ದುಪಡಿ ಮಾಡಬೇಕಿದೆ.

ಅವಕಾಶವಂಚಿತ ಸಮುದಾಯಗಳಿಗೆ ಸಮಾನ ಅವಕಾಶ ಒದಗಿಸುವ ದಿಕ್ಕಿನಲ್ಲಿ 1976ರ ಬ್ರಿಟಿಷ್ ವರ್ಣ ಸಂಬಂಧಗಳ ಕಾಯ್ದೆ ಮಾದರಿಯಲ್ಲಿ ಆಯೋಗವೊಂದನ್ನು ರಚಿಸುವುದು ಸೂಕ್ತವೆಂದು ಸಾಚಾರ್ ಸಮಿತಿ ಶಿಫಾರಸು ಮಾಡಿದೆ. ತಮ್ಮನ್ನು ತಾರತಮ್ಯಕ್ಕೆ ಗುರಿಪಡಿಸಲಾಗಿದೆ ಎಂಬ ಭಾವನೆಯನ್ನು ಮುಸ್ಲಿಮರ ಮನಸ್ಸಿನಿಂದ ದೂರ ಮಾಡಬೇಕೆಂದರೆ, ಸರ್ಕಾರ ಮಾಡುವ ನೇಮಕಾತಿಗಳಲ್ಲಿ ಮುಸ್ಲಿಮರಿಗೆ ಅವರ ಜನಸಂಖ್ಯಾ ಪ್ರಮಾಣದಷ್ಟು ಪ್ರಾತಿನಿಧ್ಯ –ವಿಶೇಷವಾಗಿ ನೀತಿ ರೂಪಿಸುವ ಹಂತದಲ್ಲಿ– ಸಿಗುವುದನ್ನು ಖಾತ್ರಿಪಡಿಸಬೇಕು"ಎಂದು 1983 ರಷ್ಟು ಹಿಂದೆಯೇ ಡಾ. ಗೋಪಾಲಸಿಂಗ್ ಸಮಿತಿಯು ಒತ್ತಿ ಹೇಳಿತ್ತು. ಆ ಬಳಿಕ 23 ವರ್ಷಗಳೇ ಕಳೆದಿವೆ: ಶಿಫಾರಸು ಕಾಗದದ ಮೇಲೇ ಉಳಿದಿದೆ. ಈಗ, ಜಸ್ಟಿಸ್ ರಾಜಿಂದರ್ ಸಾಚಾರ್ ಸಮಿತಿ ವರದಿ ದೇಶದ ಮುಂದಿದೆ.

ಇಷ್ಟೆ ಅಲ್ಲದೆ ಜಸ್ಟೀಸ್ ರಂಗನಾಥ ಮಿಶ್ರರವರ ವರದಿಯನ್ನು ಇದೇ ಕಾಂಗ್ರೆಸ್ ನೇತೃತ್ವದ ಸರ್ಕಾರವೇ ನೀಡಿದೆ. ಈ ವರದಿ ದಲಿತ ಮುಸ್ಲಿಮರ ಜೊತೆಗೆ ದಲಿತ ಕ್ರೈಸ್ತರಿಗೂ ಕಡ್ಡಾಯ ಮೀಸಲಾತಿ ಜಾರಿಗೊಳ್ಳುವಂತೆ ಸಲಹೆ ನೀಡಿದೆ.

ಬರಲಿರುವ ದಿನಗಳಲ್ಲಿ ಹೊಸ ದನಿಯೊಂದು ಸ್ಪಷ್ಟವಾಗಿ ಹಾಗೂ ಗಟ್ಟಿಯಾಗಿ ಕೇಳಿಬರುವುದು ಖಚಿತ. "ಮುಸ್ಲಿಮರ ಒಳಗೂ ಸಮಾನತೆ ಸ್ಥಾಪನೆಯಾಗಬೇಕು: ಅವಕಾಶಗಳ ಹಂಚಿಕೆಯಾಗಬೇಕು" ಎಂಬ ದನಿ ಇದು. ಇದಕ್ಕೆ ಮುಸ್ಲಿಮೇತರ ಸಮುದಾಯಗಳಲ್ಲಿನ ಪ್ರಜ್ಞಾವಂತರ ಬೆಂಬಲ ಸಿಕ್ಕುವುದು ಖಚಿತ. ದೇಶ – ವಿಶೇಷವಾಗಿ ಮುಸ್ಲಿಂ ಸಮುದಾಯ– ಈ ಧ್ವನಿಗಳಿಗೆ ಸಮರ್ಥವಾಗಿ ಸ್ಪಂದಿಸುವುದು ಅನಿವಾರ್ಯವಾಗುತ್ತದೆ.

ಅನ್ಯಾಯ ನಿವಾರಣಾ ಪ್ರಕ್ರಿಯೆಯು ಭಾರತದಲ್ಲಿ ವಿವಾದಾಸ್ಪದ ವಿಷಯವಾಗಿದೆ ಎಂಬುದು ಚಾರಿತ್ರಿಕ ಕಟುಸತ್ಯ. ಈ ಪ್ರಕ್ರಿಯೆಯಲ್ಲಿ ವಿಶೇಷ ಸೌಲಭ್ಯ/ಮೀಸಲಾತಿ (ಕಡ್ಡಾಯ ಪ್ರಾತಿನಿಧ್ಯ) ಒದಗಿಸುವುದು ಅತ್ಯಗತ್ಯವಾಗುತ್ತದೆ. ಬ್ರಿಟಿಷರ ಕಾಲದಿಂದಲೂ (1935ರಲ್ಲಿ) ಈ ಕ್ರಮವನ್ನು ಅನುಸರಿಸಿಕೊಂಡು ಬರಲಾಗಿದೆ. ಈ ಹಂತದಲ್ಲಿ, ಒಂದು ಕಡೆ ವಿಶೇಷ ಸೌಲಭ್ಯಗಳು/ಮೀಸಲಾತಿಯು, ಅವಕಾಶಗಳ ಸಮಾನ ಹಂಚಿಕೆ ಎಂಬ ಮೂಲಭೂತ ನ್ಯಾಯಕ್ಕೆ ವಿರುದ್ಧವಾಗುತ್ತದೆ ಎಂಬ ಬೊಬ್ಬೆ ಹಿಂದೂ ಸಮುದಾಯದಿಂದ ವ್ಯಕ್ತವಾದರೆ, ಇನ್ನೊಂದು ಕಡೆ ಅವಕಾಶವಂಚಿತ ಸಮುದಾಯದೊಳಗೇ ಒಂದು ಬಲಿಷ್ಠ ಗುಂಪು ಮೈದಾಳುವುದನ್ನು ಕಾಣಬೇಕಾಗುತ್ತದೆ. ಇದು ಅಪರಿಹಾರ್ಯವೆಂದರೂ, ಮೀಸಲಾತಿಯ ದುಷ್ಪರಿಣಾಮಗಳ ಬಗ್ಗೆ ಒಂದು ಕಣ್ಣಿಡುವುದು ಅತ್ಯಗತ್ಯವೆಂಬುದಂತೂ ನಿರ್ವಿವಾದವೆನಿಸಬೇಕು. ಇದೇ ಸಂದರ್ಭದಲ್ಲಿ ಎಸ್‌ಸಿ ಸಮುದಾಯಗಳ ಒಳಗೆ ಮೀಸಲಾತಿ ಸೌಲಭ್ಯದಿಂದ ಸಂಪೂರ್ಣವಾಗಿ ಅಂಚಿಗೆ ತಳ್ಳಲ್ಪಟ್ಟ ಇಂದು ಒಳ ಮೀಸಲಾತಿ ವರ್ಗೀಕರಣದ ಹೋರಾಟವನ್ನು ಕೈಗೆತ್ತಿಕೊಂಡಿರುವ ಸಮುದಾಯದ ಮೀಸಲಾತಿಯೊಳಗಿನ ಪಾಲುದಾರಿಕೆಯ ನೈತಿಕ ಪ್ರಶ್ನೆಯನ್ನು ಗಮನಿಸಬೇಕು. ಮಾದಿಗ ಸಮುದಾಯದ ಮೀಸಲಾತಿ ಹೋರಾಟದ ಪರಿವು ಅಧಿಕಾರ ರಾಜಕಾರಣದ ನೆಲೆಯನ್ನು ಸಹ ಗುರುತಿಸಿಕೊಳ್ಳುತ್ತಿರುವುದು ಈ ಹೋರಾಟದ ರಾಜಕೀಯ ಪ್ರಬುದ್ಧತೆಯನ್ನು ಸೂಚಿಸುತ್ತದೆ.

ಒಂದಾನೊಂದು ಕಾಲದಲ್ಲಿ ಆಳರಸರಾಗಿದ್ದ ಮುಸ್ಲಿಮರಿಗೆ ಈ ಗತಿ ಬಂದುದಾದರೂ ಹೇಗೆ ಎಂಬ ಪ್ರಶ್ನೆಗೆ ನಿರ್ವ್ಯಾಮೋಹದ ಉತ್ತರವನ್ನು ಕಂಡುಕೊಳ್ಳಬೇಕು. ಮುಸ್ಲಿಂ ಆಳರಸರು ತಮ್ಮ ಪ್ರಜೆಗಳನ್ನು ಗೌರವದಿಂದ ಕಾಣಲಿಲ್ಲ; ದುಷ್ಟಕೂಟವನ್ನು ಕಟ್ಟಿಕೊಂಡರು; ಪಟ್ಟಭದ್ರ ಹಿಂದೂಗಳ ಜೊತೆಗೆ ಅಮಾಯಕರನ್ನೂ ಸದೆಬಡಿದರು; (ಟಿಪ್ಪುವನ್ನು ಹೊರತುಪಡಿಸಿ ಉಳಿದೆಲ್ಲರೂ) ಜನಸಾಮಾನ್ಯ ಮುಸ್ಲಿಮರ ಪರವೂ ಇರಲಿಲ್ಲ; ಜನಸಾಮಾನ್ಯ ದಲಿತರ ಪರವೂ ಇರಲಿಲ್ಲ; ಎರಡೂ ಸಮುದಾಯಗಳ ಜನಸಾಮಾನ್ಯರನ್ನು ಅವರು ತುಚ್ಛವಾಗಿ ಕಂಡರು. ಈ ಅಂಶವು ಹಿಂದೂ–ಮುಸ್ಲಿಂ ಇಬ್ಬರಿಗೂ ಮನವರಿಕೆಯಾಗಬೇಕು. ಎಲ್ಲಾ ಮುಸ್ಲಿಂ ದೊರೆಗಳ

ಆಡಳಿತದಲ್ಲಿ ಸುಭಿಕ್ಷೆ ನೆಲೆಸಿತ್ತು ಎಂದು ಬೀಗುವುದು ಶುದ್ಧ ಮೂರ್ಖತನ ಎಂಬುದು ಮುಸ್ಲಿಮರಿಗೆ. ಎಲ್ಲಾ ಮುಸ್ಲಿಂ ದೊರೆಗಳ ಆಡಳಿತದಲ್ಲಿ ಹಿಂದೂಗಳನ್ನು ಹೊಸಕಿ ಹಾಕಲಾಯಿತೆಂಬುದು ಹಸೀ ಸುಳ್ಳು ಎಂಬುದು ಹಿಂದೂಗಳಿಗೆ ಸ್ಪಷ್ಟವಾಗಬೇಕು. ಆಗ ಮಾತ್ರ ನಾವು ಮತಾಂಧ ಹಿಂದೂ-ಮುಸ್ಲಿಂ ಶಕ್ತಿಗಳ ಸ್ವಾರ್ಥವನ್ನು ಅರಿಯಲು ಹಾಗೂ ಅವರನ್ನು ಧಿಕ್ಕರಿಸಿ ನಿಲ್ಲಲು ಸಾಧ್ಯ; ಹಿಂದೂಗಳು ಮತ್ತು ಮುಸ್ಲಿಮರು ಯಾರೇ ರಾಜರಾಗಿದ್ದಾಗಲೂ ಪಾಳೆಯಶಾಹಿ ವ್ಯವಸ್ಥೆ ಅಸ್ತಿತ್ವದಲ್ಲಿತ್ತು; ಅದಕ್ಕೆ ದಲಿತರು ಬಲಿಯಾಗಿದ್ದರು; ಈ ವ್ಯವಸ್ಥೆಯ ಸೂತ್ರಧಾರರು ಹಿಂದೂಗಳೇ ಆಗಿರಲಿ, ಮುಸ್ಲಿಮರೇ ಆಗಿರಲಿ, ಜನಸಾಮಾನ್ಯ ದಲಿತ-ಮುಸ್ಲಿಮರು ಮಾತ್ರ ನಿರಂತರವಾಗಿ ಅಂಚಿಗೆ ತಳ್ಳಲ್ಪಟ್ಟರು ಎಂಬ ಸತ್ಯಕ್ಕೆ ನಾವು ಕಣ್ಣು ಬಿಡಬೇಕು. ಚಕ್ರವರ್ತಿ ಅಕ್ಬರ್‌ನ ಮರಿಮಗನಾದ ದಾರಾಶಿಕೊ ಸ್ವತಃ ಅರಸ, ಪಂಡಿತ, ಸೂಫಿ ಸಂತರ ಅನುಯಾಯಿಯಾಗಿದ್ದರೂ ಅವನು ರಚಿಸಿದ 'ಸಮುದ್ರ ಮಥನ' ಗ್ರಂಥವು ಜನ ಸಮುದಾಯಗಳ ಸಾಂಸ್ಕೃತಿಕ ಜೀವಾಳವಾದ ಝಿುನ್ ಪಂಥವನ್ನಾಗಲಿ, ಸೂಫಿ ಪರಂಪರೆಯನ್ನಾಗಲಿ, ನಾಥ, ಆರೂಢ, ಅವಧೂತ ಶೈವ ಪರಂಪರೆಗಳನ್ನಾಗಲಿ, ಅಥವಾ ದೇಶಿ ಸಮುದಾಯಗಳ ನಾಯಕನಾದ ರಾವಣಾಸುರನ ಸಾಂಸ್ಕೃತಿಕ ಪರಂಪರೆಗಳು ಮುಖ್ಯವಾಗಲಿಲ್ಲ. ಬದಲಿಗೆ ತನ್ನ ಗ್ರಂಥದಲ್ಲಿ ಕುರಾನ್ ಪವಿತ್ರಗ್ರಂಥ ಹಾಗೂ ವೇದ ಉಪನಿಷತ್ ಗೀತೆಗಳ ಸಾರದ ಚಿಂತನಾ ಕೇಂದ್ರ ಬಿಂದು ಒಂದೇ ಆಗಿರುವುದನ್ನು ದಾರಾಶಿಕೊ ಗುರುತಿಸಲು ಯತ್ನಿಸುತ್ತಾನೆ. ಅಂದರೆ ಭಾರತವನ್ನಾಳಿದ ಬಹುತೇಕ ಮುಸ್ಲಿಂ ದೊರೆಗಳು ಸ್ಥಳೀಯ ಸಮುದಾಯಗಳ ಜೊತೆ ಮುಸ್ಲಿಂ ಸಮುದಾಯಗಳು ಸಾಂಸ್ಕೃತಿಕವಾಗಿ ಹೇಗೆ ಪರಸ್ಪರ ಪ್ರಭಾವಿಸುವ ಮೂಲಕ ಸೌಹಾರ್ದಯುತವಾಗಿ ಬದುಕುತ್ತಿವೆ ಎಂಬುದರ ಕಡೆ ಗಮನಹರಿಸಲಿಲ್ಲ. ಅವರ ಬಯಕೆ ಆಳ್ವಿಕೆಯಾಗಿತ್ತೇ ಹೊರತು, ಜನ ಸಾಮಾನ್ಯರ ಅಭಿವೃದ್ಧಿಯಾಗಿರಲಿಲ್ಲ. ಮಂಟೇ ಸ್ವಾಮಿ, ಮಲೈಮಾದೇಶ್ವರ, ಜುಂಜಪ್ಪನಂತಹ ದಲಿತರು ಬಹುಜನ ಸಮುದಾಯಗಳ ಸಾಂಸ್ಕೃತಿಕ ನಾಯಕರ ಪರಂಪರೆಗಳು ಮುಸ್ಲಿಂ ಸಮುದಾಯಗಳ ಸೂಫಿ ಪರಂಪರೆಗಳಲ್ಲಿ ಒಂದಕ್ಕೊಂದು ಬೆರೆತು ಹೋಗಿರುವುದು ಹಿಂದುತ್ವವಾದಿ ಸಾಂಸ್ಕೃತಿಕ ರಾಜಕಾರಣಿಗಳಿಗೆ ಸಹಿಸಲಸಾಧ್ಯ ಎಂಬಂತಾಗಿದೆ.

ಐತಿಹಾಸಿಕವಾಗಿ ಕ್ರಿಶ್ಚಿಯನ್, ದಲಿತ-ಮುಸ್ಲಿಂ ಸಮುದಾಯಗಳ ಸಾಂಸ್ಕೃತಿಕ ಸಂಬಂಧಗಳು ನ್ಯಾಚುರಲ್ ಅಲೆಯನ್ಸ್ ಆಗಿದ್ದು, ಅವು ಇಂದು ಐಕ್ಯತೆಯ ಅಡಿಯಲ್ಲಿ ಅಧಿಕಾರ ರಾಜಕಾರಣ ನಡೆಸಲು ಮುಂದಾಗಿದ್ದು ಸಾಂಸ್ಕೃತಿಕ ಪರಂಪರೆ ಹಿನ್ನೆಲೆಯ ಈ ರಾಜಕಾರಣ ಮುಂಬರುವ ಭಾರತೀಯ ರಾಜಕಾರಣದಲ್ಲಿ ಅಚ್ಚಳಿಯದ ಇತಿಹಾಸ ನಿರ್ಮಿಸುತ್ತದೆ.

ಸ್ವತಂತ್ರ ಭಾರತದಲ್ಲಿ ಕೆಲವು ಮುಸ್ಲಿಂ ಮುಂದಾಳುಗಳಿಗೆ ರಾಜಕೀಯವಾಗಿ ಮಣೆ ಹಾಕಲಾಯಿತಾದರೂ, ಆಳುವ ವರ್ಗವು ಜನಸಾಮಾನ್ಯ ಮುಸ್ಲಿಮರನ್ನು ಕೇವಲ ಮತಬ್ಯಾಂಕ್‌ಗಳನ್ನಾಗಿ ಪರಿಗಣಿಸುತ್ತಾ, ನಿರ್ಲಕ್ಷಿಸುತ್ತಾ ಬಂತು. ಕೋಮು ಗಲಭೆಗಳಲ್ಲಿ ಉರುಳಿದ ಮುಸ್ಲಿಮರ ಹೆಣಗಳೂ ರಾಜಕೀಯದಾಟಕ್ಕೆ ಬಳಕೆಯಾದವು. ಮತಗಳನ್ನು ಬಾಚಿಕೊಳ್ಳುವಾಗ ನೀಡಿದ ಭರವಸೆಗಳು ಗಾಳಿಪಾಲಾದವು. ಸಮುದಾಯದ ಹಿತದ ಬಗ್ಗೆ ಪ್ರಾಮಾಣಿಕ ಮತ್ತು ಅಚಲ ನಿಷ್ಠೆ ಹೊಂದಿದ ಮನಸುಗಳು ಅಪರೂಪವಾದವು. ಸ್ವತಂತ್ಯ ನಂತರದ ಕೋಮುಗಲಭೆಗಳ ನೆಪದಲ್ಲಿ ನಡೆಸುವ ಮುಸ್ಲಿಮರ ಮೇಲಿನ ದಾಳಿಯಲ್ಲಿ ಪ್ರತಿ ಅತ್ಯಾಚಾರದ ಹಿಂದೆ ಕುಟುಂಬ ಅಪರಾಧವಾಯಿತು. ಎಷ್ಟೋ ಮುಗ್ಧ ಮಕ್ಕಳು ಅನಾಥರಾದರು, ಯುವಕರು ಕ್ರಿಮಿನಾಲೈಜೇಷನ್‌ಗೆ ಒಳಗಾದರು. ಮುಸ್ಲಿಂ ಸಾಂಸ್ಕೃತಿಕ ಕೇಂದ್ರಗಳು ಹಾಗೂ ಆರ್ಥಿಕ ಮೂಲಗಳ ಏಕಕಾಲದಲ್ಲಿ ಧ್ವಂಸಗೊಂಡವು. ಭದ್ರತೆಗಾಗಿ ನಗರಕ್ಕೆ ವಲಸೆ ಬರುವ ಜನರು ಮಿನಿ ಪಾಕಿಸ್ಥಾನಗಳೆಂಬ ಹಣೆ ಪಟ್ಟಿಯುಳ್ಳ ದ್ವೀಪಗಳಲ್ಲಿ ಬದುಕುತ್ತಾ ಅನ್ಯತೆಗೊಳಗಾದರು. ಈ ಎಲ್ಲಾ ಅನ್ಯಾಯ, ಗಲಭೆ, ಅತ್ಯಾಚಾರ, ನಷ್ಟಗಳಿಂದ ಅಭದ್ರರಾಗಿದ್ದ ಮುಸ್ಲಿಂರು ಎಂದೂ ತಮ್ಮ ರಾಜಕೀಯ ಪಾಲುದಾರಿಕೆಯನ್ನು ಪಡೆಯುವ ನಿಟ್ಟಿನಲ್ಲಿ ಚಿಂತಿಸಲೂ ಸಾಧ್ಯವಾಗಲಿಲ್ಲ.

ಕೋಮು ಸೌಹಾರ್ದತೆ ಬಯಸುವ ಪ್ರಗತಿಪರರಿಗೆ ಕಾಂಗ್ರೆಸ್ ಪಕ್ಷದಲ್ಲಿನ ಕೆಲವರ ಮೃದು ಹಿಂದುತ್ವ, ಬೆಣ್ಣೆ ಸವರುವ ಮಾತುಗಳ ಹಿಂದಿನ ಕತ್ತು ಹಿಸುಕುವ ಅಜೆಂಡಾ ಗೋಚರಿಸುವುದೇ ಇಲ್ಲ. ಬಿಜೆಪಿಯಲ್ಲಿನ ಕಟು ಹಿಂದುತ್ವವಾದಿಗಳಿಗಿಂತ ಕಾಂಗ್ರೆಸ್ ಪಕ್ಷದೊಳಗಿನ ಕೆಲವು ಮೃದು ಹಿಂದುತ್ವ ವಾದಿಗಳು ಮುಸ್ಲಿಂರಿಗೆ ಹೆಚ್ಚು ಅಪಾಯಕಾರಿಯಾಗಿದ್ದಾರೆ. ಅಂತರ್‌ಜಾತಿ ವಿವಾಹಿತರಿಗೆ ಮೀಸಲಾತಿಗಾಗಿ ಒತ್ತಾಯಿಸುವ ಇವರಿಗೆ ದಲಿತ–ಮುಸ್ಲಿಂ, ದಲಿತ–ಕ್ರೈಸ್ತರ ನಡುವಿನ ಸೌಹಾರ್ದಯುತ ವಿವಾಹಿತರು ಇವರ ಗಮನಕ್ಕೆ ಬರುವುದಿಲ್ಲ. ಅಂತರ್ ಧರ್ಮಿಯ ವಿವಾಹಿತರಿಗೆ ಸಾಮಾಜಿಕ ಭದ್ರತೆಯ ಜೊತೆಗೆ ಮೀಸಲಾತಿಯನ್ನು ಕಲ್ಪಿಸಬೇಕಾಗಿದೆ.

ದಲಿತರ ಹಾಗೆ ಮುಸಲ್ಮಾನರೂ ಅಪಮಾನಕ್ಕೆ ಹಾಗೂ ಕೀಳರಿಮೆಗೆ ಗುರಿಯಾಗಿದ್ದಾರೆ. ಹಿಂಸೆ, ದೌರ್ಜನ್ಯ ಅನ್ಯಾಯಗಳು ಅವರ ಮೇಲೆ ನಿರಂತರವಾಗಿ ನಡೆದಿವೆ. ಸಂವಿಧಾನ ಜಾರಿಗೊಂಡಾಗಿನಿಂದಲೇ ಮೀಸಲಾತಿ ದೊರೆತ ಪರಿಣಾಮ ವಾಗಿ ಹಾಗೂ ಡಾ. ಅಂಬೇಡ್ಕರರಂಥ ಧೀಮಂತ ನೇತಾರರ ಹೋರಾಟದಿಂದಾಗಿ ಸ್ವಾತಂತ್ರ್ಯ ಬಂದ 50 ವರ್ಷಗಳಲ್ಲಿ ದಲಿತರಲ್ಲಿ ಒಂದು ಬಲಿಷ್ಠ ಗುಂಪು ನಿರ್ಮಾಣವಾಗಿ, ಸಮುದಾಯದ ಹಿತ ಕಾಪಾಡುವ ಕಾರ್ಯದಲ್ಲಿ ತಕ್ಕ ಮಟ್ಟಿಗಾದರೂ ನಿರತವಾಗಿರುವುದು ನಮಗೆ ಕಾಣುತ್ತಿದೆ. ಆದರೆ, ಮುಸ್ಲಿಮರ ವಿಷಯದಲ್ಲಿ ಹೀಗಾಗಲೇ

ಇಲ್ಲ. ಇವರಲ್ಲಿನ ಮೇಲ್ವರ್ಗ ಇಡೀ ಸಮುದಾಯದ ಪ್ರಗತಿಯ ಹೊಣೆ ಹೊರಲು ಮುಂದಾಗಲಿಲ್ಲ. ಇದಕ್ಕೆ ಕಾರಣವೂ ಇದೆ. ಮುಸ್ಲಿಮರಲ್ಲಿ ಮೇಲ್ವರ್ಗ ಎನಿಸಿರುವುದು ಮೇಲ್ ಜಾತಿಯೂ ಆಗಿದೆ. ಆದುದರಿಂದಲೇ ಕೆಳಜಾತಿಯವರು ಎಂದು ಪರಿಗಣಿಸಲ್ಪಟ್ಟಿರುವ ಮುಸ್ಲಿಮರ ಅಭಿವೃದ್ಧಿಯ ಬಗ್ಗೆ ಈ ಮೇಲ್ವರ್ಗಕ್ಕೆ ಕಾಳಜಿಯಿಲ್ಲ. ಇದರಿಂದಾಗಿ, ಪರಿತ್ಯಕ್ತ, ಅವಮಾನಿತ, ಅಶುದ್ಧ ಎಂದು ಗುರುತಿಸಲ್ಪಟ್ಟ ಸಮುದಾಯಗಳ ಗತಿಯೇ ಬಹುಸಂಖ್ಯಾತ ಮುಸ್ಲಿಮರಿಗೂ ಬಂತು.

ತಮ್ಮ ಧಾರ್ಮಿಕ ಸಂಜಿಕೆಯನ್ನು ಉಳಿಸಿಕೊಳ್ಳಲು, ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಹಾಗೂ ತಮ್ಮ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಮುಸ್ಲಿಮರಿಗೆ ಭಾರತದ ಸಂವಿಧಾನ ಸಂಪೂರ್ಣ ಅವಕಾಶಗಳನ್ನು ಒದಗಿಸಿದೆ. ಆದರೆ ಈ ಅವಕಾಶಗಳನ್ನು ಉಪಯೋಗಿಸಿಕೊಳ್ಳಲು ಮುಸ್ಲಿಮರು ಮುಂದಾಗಲಿಲ್ಲ. ಈ ಕಾರಣಕ್ಕೆ ದೇಶದ ಆಡಳಿತದಲ್ಲಿ ಅವರು ಹೆಚ್ಚಿನ ಮಟ್ಟಿಗೆ ಪಾಲುಗೊಳ್ಳಲಿಲ್ಲ.

ಯೋಜನೆಗಳನ್ನು ರೂಪಿಸುವಾಗ ಮತ್ತು ವಿವಿಧ ಕಾರ್ಯಕ್ರಮಗಳ ಪ್ರಯೋಜನವು ತಲುಪಿರುವುದನ್ನು ವಿಶ್ಲೇಷಿಸುವಾಗ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಪ. ಜಾತಿ ಮತ್ತು ಪಂಗಡಗಳನ್ನು ನಿರ್ದಿಷ್ಟವಾಗಿ ಪರಿಗಣಿಸುವ ಪರಿಪಾಠವನ್ನು ಮುಂದುವರೆಸಿಕೊಂಡು ಬಂದವೇ ಹೊರತು, ಈ ಜಾತಿ ಮತ್ತು ಪಂಗಡಗಳಷ್ಟೇ ಅವಕಾಶವಂಚಿತರಾಗಿರುವ ಮುಸ್ಲಿಮರನ್ನು ನಿರ್ದಿಷ್ಟವಾಗಿ ಪರಿಗಣಿಸಲಿಲ್ಲ.

ಪ್ರತಿಬಾರಿ ಜನಗಣತಿ ನಡೆದ ಬಳಿಕ, ಮಾಧ್ಯಮಗಳಲ್ಲಿ ಮುಸ್ಲಿಮರ ಜನಸಂಖ್ಯಾ ಹೆಚ್ಚಳ ಪ್ರಮಾಣವನ್ನು ಕುರಿತು ಚರ್ಚೆ ಮಾಡುವ ಮೂಲಕ ಧಾರ್ಮಿಕ ದ್ವೇಷವನ್ನು ಬೆಳೆಸಲು ಪುಷ್ಟಿ ನೀಡಲಾಯಿತೇ ಹೊರತು ಮುಸ್ಲಿಮರು ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಕಳವಳಕಾರಿ ಪ್ರಮಾಣದಲ್ಲಿ ಹಿಂದುಳಿದಿದ್ದಾರೆಂಬ ಕಟುಸತ್ಯದ ಬಗ್ಗೆ ಕಾಳಜಿ ವ್ಯಕ್ತವಾಗಲಿಲ್ಲ; ಬಡತನ ನಿರ್ಮೂಲನಾ ಯೋಜನೆಗಳು ಮತ್ತು ಮಾನವ ಅಭಿವೃದ್ಧಿ ಕಾರ್ಯತಂತ್ರಗಳ ಪ್ರಯೋಜನವು ಮುಸ್ಲಿಮರಿಗೆ ದಕ್ಕಲಿಲ್ಲ ಎಂಬುದು ಸರ್ಕಾರಗಳ ಮನಸ್ಸಿಗೆ ನಾಟಲಿಲ್ಲ. ಮಂಡಲ್ ವರದಿ ಹಿನ್ನೆಲೆಯಲ್ಲಿ ಮೀಸಲಾತಿಯು ಮತ್ತೆ ಚರ್ಚೆಗೆ ಬಂದು, ಇತರ ಹಿಂದುಳಿದ ಜಾತಿಗಳಿಗೆ ಮೀಸಲಾತಿಯನ್ನು ವಿಸ್ತರಿಸುವ ಪ್ರಕ್ರಿಯೆಯ ಕಾಲದಲ್ಲೂ ಮುಸ್ಲಿಂ ಸಮುದಾಯವನ್ನು ನಿರ್ಲಕ್ಷಿಸಲಾಯಿತು. ಸಾಮಾಜಿಕ–ಧಾರ್ಮಿಕ ಸಮುದಾಯಗಳಲ್ಲಿ ಸಾಕ್ಷರತಾ ಪ್ರಮಾಣ ಹಾಗೂ ಇವುಗಳಿಗೆ ಆಡಳಿತ ಕ್ಷೇತ್ರದಲ್ಲಿ ದೊರಕಿದ ಪ್ರಮಾಣವು 2001ರ ಜನಗಣತಿ ವಿವರಗಳು ಬಯಲಾದಾಗಲೇ ಮುಸ್ಲಿಮರ ದಯನೀಯ ಸ್ಥಿತಿ ಮತ್ತೊಮ್ಮೆ ಸಾಬೀತಾಯಿತು.

2001ರ ಜನಗಣತಿ ಕಾಲದಲ್ಲಿ ಹಿಂದುಳಿದ ಜಾತಿಗಳೆಂದು ತಮ್ಮನ್ನು ಗುರುತಿಸಿಕೊಂಡವರ ಪ್ರಮಾಣ, ಹಿಂದೂ ಸಮುದಾಯಗಳಲ್ಲಿ ಶೇ. 43 ರಷ್ಟಿದ್ದರೆ, ಇದು ಮುಸ್ಲಿಂ ಸಮುದಾಯದಲ್ಲಿ ಶೇ. 41 ರಷ್ಟಿದೆ. (ಕೇವಲ ಶೇ. 0.8 ಮುಸ್ಲಿಮರು ತಮ್ಮನ್ನು ಪ. ಜಾತಿಯವರೆಂದು, ಇದಕ್ಕಿಂತ ಕಡಿಮೆ ಪ್ರಮಾಣದ ಜನರು ತಮ್ಮನ್ನು ಪ. ಪಂಗಡದವರೆಂದು ಗುರುತಿಸಿಕೊಂಡಿದ್ದಾರೆ). ಅಂದರೆ ಹಿಂದೂ ಮತ್ತು ಮುಸ್ಲಿಂ ಎರಡೂ ಸಮುದಾಯಗಳಲ್ಲಿ ಹಿಂದುಳಿದ ಜಾತಿಗಳವರ ಪ್ರಮಾಣ ಸರಿಸುಮಾರು ಶೇ. 50 ರಷ್ಟಿದೆ ಎಂದಂತಾಯಿತು. ಹೀಗಿದ್ದಾಗ, ಮಂಡಲ್ ವರದಿ ಶಿಫಾರಸಿನಂತೆ ಒಟ್ಟಾರೆ ಶೇ. 27 ರಷ್ಟು ಮೀಸಲಾತಿಯು ಹಿಂದುಳಿದವರಿಗೆ ದೊರಕುವಂತಾದಾಗ, ಈ ಪಾಲಿನಲ್ಲಿ ಶೇ. 50 ರಷ್ಟು (ಅಂದರೆ ಶೇ. 13.5 ರಷ್ಟು) ಮೀಸಲಾತಿಯು ಮುಸ್ಲಿಮರಿಗೆ ದೊರಕುವುದು ನ್ಯಾಯವಾಗಿತ್ತು; ಆದರೆ, ಮಂಡಲ್ ವರದಿ ಹಿನ್ನೆಲೆಯಲ್ಲಿ ಮುಸ್ಲಿಮರಿಗೆ ದೊರಕಿರುವುದು ಕೇವಲ ಶೇ. 3 ರಷ್ಟು ಮೀಸಲಾತಿ; (ಅಂದರೆ ದೊರಕಬೇಕಾದುದರಲ್ಲಿ ಕೇವಲ ಶೇ. 25 ರಷ್ಟನ್ನು ಮಾತ್ರ ನೀಡಲಾಗಿದೆ). ಮೀಸಲಾತಿ ಒದಗಿಸಿದ ಮಾತ್ರಕ್ಕೆ ಮುಸ್ಲಿಮರ ಎಲ್ಲಾ ಸಮಸ್ಯೆಗಳು ಪರಿಹಾರವಾಗುವುದಿಲ್ಲ. ಏಕೆಂದರೆ ಮೀಸಲಾತಿಯು ಸರ್ಕಾರಿ ಸೇವೆಗೆ ಮಾತ್ರ ಸಂಬಂಧಿಸಿದೆ; ಈ ಅಂಶವನ್ನು ನೆನಪಿನಲ್ಲಿ ಇಟ್ಟುಕೊಂಡು ಮೇಲಿನ ಅಂಶಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಈಗ ಮುಸ್ಲಿಮರು ಮಸೀದಿಗಳಿಗೆ ಹತ್ತಿರವಿದ್ದಾರೆ; ಸಮುದಾಯ ಅಭಿವೃದ್ಧಿ ಕಾರ್ಯಗಳನ್ನು ಸ್ವಂತವಾಗಿ ಕೈಗೊಳ್ಳಲು ಈ ಮಸೀದಿಗಳಿಗೆ ಆರ್ಥಿಕ ಬಲವಿಲ್ಲ; ಸರ್ಕಾರಿ ಯೋಜನೆಗಳ ಪ್ರಯೋಜನವನ್ನು ಮುಸ್ಲಿಮರಿಗೆ ಒದಗಿಸಿಕೊಡುವಷ್ಟು ಮಾನವ ಹಾಗೂ ಇತರ ಸಂಪನ್ಮೂಲಗಳು ಮಸೀದಿಗಳ ಬಳಿಯಿಲ್ಲ. ಹಾಗಾಗಿ, ಈಗ ಅವು ಕೇವಲ ಧಾರ್ಮಿಕ ಶಿಕ್ಷಣ ನೀಡುವುದರಲ್ಲಿ ನಿರತವಾಗಿವೆ.

ವಕ್ಫ್ ಸಂಬಂಧಿ ಸಂಸ್ಥೆಗಳು, ಭಾರತೀಯ ಟ್ರಸ್ಟ್ ಕಾಯ್ದೆ ಪ್ರಕಾರ, ಸಮುದಾಯ ಕಲ್ಯಾಣ ಅಭಿವೃದ್ಧಿ ಕೇಂದ್ರಗಳೆಂದು ಕಾನೂನುಸಮ್ಮತವಾಗಿ ಪರಿಗಣಿಸಲ್ಪಡಬೇಕು. ಆಗ ಅವುಗಳು, ಜೀವನಾವಶ್ಯಕ ಸೌಲಭ್ಯಗಳಿಂದ ವಂಚಿತರಾದವರ ಉಪಯೋಗಕ್ಕಾಗಿ ಸರ್ಕಾರಿ/ಸಹಕಾರಿ/ಖಾಸಗಿ ಸಂಸ್ಥೆಗಳಿಂದ ವಂತಿಗೆ ಪಡೆಯಲು, ವೆಚ್ಚ ಮಾಡಲು ಅರ್ಹವಾಗುತ್ತವೆ. ಈ ಸಂಸ್ಥೆಗಳನ್ನು ವಕ್ಫ್ ಮಂಡಳಿ ಮತ್ತು ಮಸೀದಿಗಳೊಂದಿಗೆ ಸೂತ್ರೀಕರಿಸಿದಾಗ ಅವುಗಳು ಅವಕಾಶವಂಚಿತ ಮುಸ್ಲಿಮರ ಜೀವನಮಟ್ಟವನ್ನು ಹೆಚ್ಚಿಸುವ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳಬಹುದು.

ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿರುವ ಭಾರತೀಯ ಸಂವಿಧಾನದ ಪ್ರಕಾರವೇ, ಜನರು ತಮಗೆ ಇಷ್ಟ ಬಂದ ಧರ್ಮದೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಬಹುದು;

ಧರ್ಮಾಚರಣೆಯಲ್ಲಿ ತೊಡಗಬಹುದು; ಆ ಧರ್ಮವನ್ನು ಬೋಧಿಸಬಹುದು ಮತ್ತು ಪ್ರಚಾರ ಮಾಡಬಹುದು. ಹೀಗಿರುವಾಗ ನಾವು ಆ ಧರ್ಮದ ಆಧಾರದಲ್ಲಿ ಚರ್ಚೆಯನ್ನೇಕೆ ಮಾಡಬಾರದು?

ನಿಜ, ನಮ್ಮ ಸಂವಿಧಾನ ಧರ್ಮಾಧಾರಿತ ಮೀಸಲಾತಿಯನ್ನು ಒಪ್ಪಿಲ್ಲ. ಅಲ್ಲದೇ, ಜಸ್ಟಿಸ್ ರಾಜೆಂದರ್ ಸಾಚಾರ್ ನೇತೃತ್ವದಲ್ಲಿ ರಚನೆಯಾದ ಉನ್ನತ ಮಟ್ಟದ ಸಮಿತಿಯು, ಮುಸ್ಲಿಮರಿಗೆ ಮೀಸಲಾತಿ ಒದಗಿಸುವ ಏಕೈಕ ಉದ್ದೇಶಕ್ಕಾಗಿ ರಚನೆಯಾದುದಲ್ಲ; ಮುಸ್ಲಿಮರ ಸ್ಥಿತಿಗತಿಯನ್ನು ಸಮಗ್ರವಾಗಿ ಅಧ್ಯಯನ ಮಾಡುವುದು ಈ ಸಮಿತಿಯ ಕಾರ್ಯವಾಗಿತ್ತು: ಅದನ್ನು ಸಮಿತಿ ಪೂರೈಸಿದೆ.

ಮುಸ್ಲಿಮರನ್ನು ಕೇಂದ್ರೀಕರಿಸಿ ಈಗಾಗಲೇ ನಡೆದಿರುವ ಚರ್ಚೆ, ಬಹುತೇಕವಾಗಿ ಅವರ ಜನಸಂಖ್ಯಾ ಏರಿಕೆ ಕುರಿತು ನಡೆದಿದೆ. "ಮುಸ್ಲಿಮರ ಜನಸಂಖ್ಯೆ ಬಹುವೇಗವಾಗಿ ಹೆಚ್ಚುತ್ತಿದೆ; ಮುಸ್ಲಿಮರೆಲ್ಲ ನಾಲ್ಕು ಮದುವೆಯಾಗುತ್ತಾರೆ; ಕುಟುಂಬ ಯೋಜನೆಯನ್ನು ತಿರಸ್ಕರಿಸುತ್ತಾರೆ; ಒಟ್ಟು ಒಟ್ಟಾಗಿ ವಾಸಿಸಿ, ದಂಗೆಯನ್ನು ನಡೆಸುತ್ತಾರೆ; ಮಕ್ಕಳನ್ನು ಮದರಸಾಗಳಿಗೆ ಕಳಿಸುತ್ತಾರೆ; ದೇಶದ್ರೋಹಿ ಚಿಂತನೆಯನ್ನು ಪ್ರಸಾರ ಮಾಡುತ್ತಾರೆ .. .. ಇತ್ಯಾದಿ ನಡೆದಿರುವ ಚರ್ಚೆಯ ಮೂಲದಲ್ಲಿ, ಮುಸ್ಲಿಮರ ಬಗ್ಗೆ ಅಪಚಾರ ಎಸಗುವ ವರಸೆಯೇ ಇದೆ. ಇದನ್ನು ಹಿಂದುತ್ವವಾದಿ ಶಕ್ತಿಗಳು ಅಬ್ಬರದಿಂದ ಮಾಡುತ್ತಿವೆ. 'ಒಂದು ದಿನ, ಮುಸ್ಲಿಮರ ಜನಸಂಖ್ಯೆಯು ಮುಸ್ಲಿಮೇತರರ ಜನಸಂಖ್ಯೆಯನ್ನು ಮೀರಿಸುವಷ್ಟು ಬೆಳೆಯುತ್ತದೆ' ಎಂಬ ಹುಸಿ ಭಯವನ್ನು ಹುಟ್ಟಿಸಲಾಗುತ್ತಿದೆ. ಈ ಬಿಸಿಯಲ್ಲಿ ಮುಸ್ಲಿಮರ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ಸ್ಥಿತಿಗತಿಯ ಬಗ್ಗೆ ಚರ್ಚೆಯಾಗುವುದನ್ನು ತಡೆಹಿಡಿಯಲಾಗುತ್ತದೆ.

2001ರ ಜನಗಣತಿವರೆಗೆ ಮುಸ್ಲಿಮರ ಸಾಕ್ಷರತಾ ಮಟ್ಟವೇ ದಾಖಲಾಗಿರಲಿಲ್ಲ; ವಿವಿಧ ಕ್ಷೇತ್ರಗಳಲ್ಲಿ ಅವರಿಗೆ ದೊರಕಿದ ಪ್ರಾತಿನಿಧ್ಯದ ಪ್ರಮಾಣವನ್ನು ದಾಖಲು ಮಾಡಿರಲಿಲ್ಲ. ಮುಸ್ಲಿಮರ ವಾಸ್ತವ ಪ್ರಗತಿ ಅಥವಾ ಹಿಂದುಳಿದಿರುವಿಕೆಯನ್ನು ದೇಶದ ಮುಂದಿಡುವ ಪ್ರಯತ್ನಗಳೇ ನಡೆಯಲಿಲ್ಲ; ಇದುವರೆಗೆ, ಕೇವಲ ಕಪೋಲಕಲ್ಪಿತ ಅಂಶಗಳನ್ನು ಆಧರಿಸಿ, ಪ್ರಚಾರವನ್ನು ಮಾಡುತ್ತಾ ಬರಲಾಗಿದೆ.

ನ್ಯಾಷನಲ್ ಕೌನ್ಸಿಲ್ ಆಫ್ ಅಪ್ಲೈಡ್ ಇಕನಾಮಿಕ್ ರಿಸರ್ಚ್ ಸಂಸ್ಥೆಯ ಪರವಾಗಿ ನಡೆಸಿದ ಅಧ್ಯಯನದಲ್ಲಿ, ಇತರ ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಗಳಿಗಿಂತಲೂ ಅಂದರೆ ಕ್ರೈಸ್ತರು, ಸಿಕ್ಖರು, ಬೌದ್ಧರು (ನವಬೌದ್ಧರನ್ನು ಹೊರತುಪಡಿಸಿ) ಜೈನರಿಗಿಂತಲೂ, ಮುಸ್ಲಿಮರ ಸ್ಥಿತಿಗತಿ ಶೋಚನೀಯವಾಗಿದೆ ಎಂಬ ಕಟುಸತ್ಯ ಬಯಲಾಯಿತು. ಮಾನವ ಅಭಿವೃದ್ಧಿ ಸೂಚ್ಯಂಕದ ರಾಷ್ಟ್ರೀಯ ಸರಾಸರಿ ಪ್ರಮಾಣಕ್ಕಿಂತಲೂ, ಮುಸ್ಲಿಮರ ಅಭಿವೃದ್ಧಿ ಸೂಚ್ಯಂಕದ ಪ್ರಮಾಣ ಕೆಳಗಿರುವುದು ಬೆಳಕಿಗೆ ಬಂತು.

ಮುಸ್ಲಿಮರ ಐಡೆಂಟಿಟಿ ಮತ್ತು ಭದ್ರತೆ ಒಂದು ಪ್ರಮುಖ ಪ್ರಶ್ನೆಯಾಗಿದೆ. ಅವರನ್ನು ಅಭಿವೃದ್ಧಿಯ ಫಲಾನುಭವದಿಂದ ಹೊರಗಿಡಲಾಗಿದೆ ಎಂಬ ಕಟುಸತ್ಯ ಕಣ್ಣಿಗೆ ರಾಚುತ್ತಿದ್ದರೂ, 'ಅವರನ್ನು ತುಷ್ಟೀಕರಿಸಲಾಗುತ್ತಿದೆ' ಎಂಬ ಅಪ್ರಾಮಾಣಿಕ ಪ್ರಚಾರವನ್ನು ಹಿಂದುತ್ವವಾದಿ ಶಕ್ತಿಗಳು ಮಾಡುತ್ತಿದ್ದಾರೆ. ವಾಸ್ತವವೆಂದರೆ, ಇಂದು ಮುಸ್ಲಿಮರು ಎಲ್ಲಾ ಕ್ಷೇತ್ರಗಳಲ್ಲೂ ವಂಚಿತರಾಗಿದ್ದಾರೆ. ಇಷ್ಟರ ಮೇಲೆ ದೇಶದ್ರೋಹಿಗಳು, ಪಾಕಿಸ್ತಾನಪರರು, ಭಯೋತ್ಪಾದಕರು ಇತ್ಯಾದಿ ಆರೋಪಗಳಿಗೆ ಅವರನ್ನು ಗುರಿಪಡಿಸಲಾಗುತ್ತಿದೆ. ದೇಶದಲ್ಲಿ ವಿಚ್ಛಿದ್ರಕಾರಿ ಚಟುವಟಿಕೆಗಳು ವರದಿಯಾದ ಕೂಡಲೇ, ಮುಸ್ಲಿಂ ಮೊಹಲ್ಲಾಗಳ ಮೇಲೆ ಹಲ್ಲೆ ಮಾಡಲಾಗುತ್ತದೆ: ಅವರನ್ನು ಏಕಪಕ್ಷೀಯವಾಗಿ ಜೈಲಿಗೆ ತಳ್ಳಲಾಗುತ್ತಿದೆ. ಭಾರತದಲ್ಲಿ ನೆಲೆಸಿರುವ ಮುಸ್ಲಿಮರು ಭಾರತವನ್ನೇ ತಾಯಿನಾಡಾಗಿ ಪರಿಗಣಿಸಿದ್ದಾರೆ. ಹೀಗಿರುವಾಗ, ಅವರನ್ನು ಸಂಶಯದಿಂದ ನೋಡುವುದು, ತಾಯಿನಾಡ ಮೇಲಿನ ಪ್ರೇಮವನ್ನು ಸಾಬೀತುಪಡಿಸಲು ಒತ್ತಾಯಿಸಲಾಗುತ್ತದೆ.

ಭಾರತವು ವಿವಿಧ ಭಾಷಿಕ, ಜಾತೀಯ, ಧರ್ಮೀಯ ಹಾಗೂ ಪ್ರಾದೇಶಿಕ ವೈವಿಧ್ಯವುಳ್ಳ ದೇಶ. ಆದುದರಿಂದ, ಇಲ್ಲಿನ ಎಲ್ಲಾ ಅವಕಾಶಗಳು ವೈವಿಧ್ಯಮಯ ಸಾಮಾಜಿಕ ಗುಂಪುಗಳಲ್ಲಿ ಹಂಚಿಕೆಯಾಗಬೇಕಾಗುತ್ತದೆ. ಆದರೆ ವಾಸ್ತವವೆಂದರೆ ಆಡಳಿತ, ಸೇವೆಗಳ ವಿತರಣೆ, ಶಿಕ್ಷಣ ಮತ್ತು ಉದ್ಯೋಗಾವಕಾಶಗಳಲ್ಲಿ ಎಲ್ಲಾ ಸಮುದಾಯಗಳಿಗೆ ನ್ಯಾಯವಾದ ಪ್ರಾತಿನಿಧ್ಯವಿಲ್ಲ. ಪ್ರಾಥಮಿಕ ಶಿಕ್ಷಣದಲ್ಲೂ ನ್ಯಾಯ ದೊರಕಿಲ್ಲ. ಸಂವಿಧಾನವು ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಿರುವಾಗ, ಒಂದು ಪ್ರದೇಶದಲ್ಲಿನ ಶಾಲೆಯಲ್ಲಿ ಆ ಪ್ರದೇಶದಲ್ಲಿ ನೆಲೆಸಿರುವ ಎಲ್ಲಾ ಸಮುದಾಯಗಳಿಗೆ ನ್ಯಾಯಬದ್ಧವಾದ ಪ್ರಾತಿನಿಧ್ಯ ಸಿಕ್ಕದಿದ್ದರೆ ಹೇಗೆ? ಇದನ್ನು 'ಬೇಡಿಕೆಯಾಗಿ, ಮೀಸಲಾತಿಯಾಗಿ' ಅಷ್ಟೇ ಕೇಳಬೇಕಾಗಿಲ್ಲ; ಬದಲಾಗಿ, 'ಇದನ್ನು ಪಡೆದುಕೊಳ್ಳುವುದು ಪ್ರತಿಯೊಬ್ಬರ ಹಕ್ಕು: ಈ ಹಕ್ಕನ್ನು ಪಡೆದುಕೊಳ್ಳಲು ಯಾವುದೇ ಸಾಮಾಜಿಕ ಗುಂಪು ಮುಂದಾದರೂ ತಪ್ಪಾಗುವುದಿಲ್ಲ. ತಾರತಮ್ಯ ಮತ್ತು ಅವಕಾಶಗಳ ಸಮಾನ ವಿತರಣೆಯ ದೃಷ್ಟಿಯಿಂದ' ಕೂಡ ಕೇಳಬೇಕಾಗುತ್ತದೆ.

ಮೀಸಲಾತಿಗಾಗಿ ಆಗ್ರಹಪಡಿಸುವುದು ಇಸ್ಲಾಂ ವಿರೋಧಿ ಎಂದು ಬಹುತೇಕ ಮುಸ್ಲಿಮರು ದೀರ್ಘಕಾಲದಿಂದಲೂ ಭಾವಿಸಿದ್ದರು. ಆದರೆ, ಮಂಡಲ್ ವರದಿಯು 1989ರಲ್ಲಿ ಜಾರಿಗೊಂಡ ಬಳಿಕ, ಮೀಸಲಾತಿಯು ಮುಸ್ಲಿಂ ಸ್ಥಿತಿಗತಿಯನ್ನು ಕೊಂಚಮಟ್ಟಿಗಾದರೂ ಉತ್ತಮಪಡಿಸುವ ಮಾರ್ಗಗಳನ್ನು ತೆರೆದ ಬಳಿಕ, ಮುಸ್ಲಿಮರಲ್ಲಿ ಮೀಸಲಾತಿಯ ಬಗ್ಗೆ ಅಭಿಪ್ರಾಯ ಬದಲಾಗಿದೆ.

ಸಾಚಾರ್ ವರದಿಯು ಉಲ್ಲೇಖಿಸಿರದಿದ್ದರೂ, ದೇಶದ ಸಶಸ್ತ್ರ ಪಡೆಗಳಲ್ಲಿ

ಮುಸ್ಲಿಮರಿಗೆ ಶೇ. 3 ಕ್ಕಿಂತಲೂ ಹೆಚ್ಚಿನ [illegible] ರುವುದಕ್ಕೆ ಮತ್ತು ದೆಹಲಿ, ಮುಂಬಯಿಗಳಂಥ ಪ್ರಮುಖ ನಗರಗಳಲ್ಲಿನ ಜೈಲುಗಳಲ್ಲಿ ವಿಚಾರಣಾಧೀನ ಕೈದಿಗಳಾಗಿರುವುದು ಮುಸ್ಲಿಮರ ಸಂಖ್ಯೆ ಅವರ ಜನಸಂಖ್ಯಾ ಪ್ರಮಾಣಕ್ಕಿಂತ ಅತಿ ಹೆಚ್ಚಾಗಿರುವುದಕ್ಕೆ ಪ್ರಭುತ್ವ ಹಾಗೂ ಸಮಾಜದಲ್ಲಿ ಆಳವಾಗಿ ಬೇರೂರಿರುವ ಮುಸ್ಲಿಂ ವಿರೋಧಿ ಭಾವನೆಯೇ ಕಾರಣ ಎಂಬುದು ಸ್ಪಷ್ಟ.

ಸರ್ಕಾರದ ನ್ಯಾಷನಲ್ ಕ್ರೈಂ ರಿಕಾರ್ಡ್ ಬ್ಯೂರೋ(ಎನ್‌ಸಿಆರ್‌ಬಿ) ವತಿಯಿಂದ ಪ್ರತಿ ವರ್ಷ ಪ್ರಕಟವಾಗುವ ಕ್ರೈಂಸ್ ಇನ್ ಇಂಡಿಯಾ ಎಂಬ ಸಂಪುಟದಲ್ಲಿನ ವಿವರಗಳು ಪೋಲೀಸ್ ಮತ್ತಿತರ ಸಶಸ್ತ್ರ ಪಡೆಗಳಲ್ಲಿ ಒಂದು ರಾಜ್ಯವನ್ನು ಹೊರತುಪಡಿಸಿದರೆ ಯಾವೊಂದು ರಾಜ್ಯದಲ್ಲೂ ಮುಸ್ಲಿಮರಿಗೆ ಅವರ ಜನಸಂಖ್ಯೆ ಪ್ರಮಾಣದಷ್ಟು ಪ್ರಾತಿನಿಧ್ಯ ದೊರಕಿಲ್ಲ ಎಂಬುದು ಇದರಿಂದ ಗೊತ್ತಾಗುತ್ತದೆ.

ತಮಿಳುನಾಡಿನಲ್ಲಿ ಮುಸ್ಲಿಮರ ಜನಸಂಖ್ಯಾ ಪ್ರಮಾಣ ಕೇವಲ ಶೇ. 5.56 ರಷ್ಟು; ಅಲ್ಲಿನ ಪೋಲೀಸ್ ಮತ್ತಿತರ ಸಶಸ್ತ್ರ ಪಡೆಗಳಲ್ಲಿ ಅವರ ಪ್ರಮಾಣ ಶೇ.0.11 ರಷ್ಟು ಮಾತ್ರ; 2004ರ ಎನ್‌ಸಿ.ಆರ್.ಬಿ. ದಾಖಲೆಯ ಪ್ರಕಾರ ತಮಿಳುನಾಡಿನ ಪೋಲೀಸ್ ಮತ್ತಿತರ ಸಶಸ್ತ್ರ ಪಡೆಗಳ ಸಿಬ್ಬಂದಿ ಬಲ ಶೇ.88.52; ಈ ಪೈಕಿ, ಮುಸ್ಲಿಮರಿದ್ದುದು ಕೇವಲ 79 ಜನ. ಇದು ಇಡೀ ಭಾರತದಲ್ಲಿ ದಾಖಲಾದ ಅತಿ ಕಡಿಮೆ ಪ್ರಮಾಣ. ಆದರೂ 1997ರಲ್ಲಿ ಕೊಯಂಬತ್ತೂರಿನಲ್ಲಿ ನಡೆದ ಕೋಮುದಂಗೆಯನ್ನು ಹೊರತುಪಡಿಸಿದರೆ, 1995 ರಿಂದ 2003ರವರೆಗೆ ಆ ರಾಜ್ಯದಲ್ಲಿ ಯಾವುದೇ ಭಾರಿ ಕೋಮುದಂಗೆ ಸಂಭವಿಸಲಿಲ್ಲ.

ಮಹಾರಾಷ್ಟ್ರದಲ್ಲಿ ಮುಸ್ಲಿಮರ ಜನಸಂಖ್ಯೆ ಪ್ರಮಾಣ ಶೇ.11 ರಷ್ಟು ಪೋಲೀಸ್ ಮತ್ತಿತರ ಸಶಸ್ತ್ರ ಪಡೆಗಳಲ್ಲಿ ಮುಸ್ಲಿಮರಿಗೆ ಪ್ರಾತಿನಿಧ್ಯ ಸಿಕ್ಕಿರುವುದು ಶೇ.5 ರಷ್ಟು. ಗುಜರಾತ್‌ನಲ್ಲಿ ಮುಸ್ಲಿಮರ ಜನಸಂಖ್ಯಾ ಪ್ರಮಾಣ ಶೇ.10 ರಷ್ಟು ಪೋಲೀಸ್ ಮತ್ತಿತರ ಸಶಸ್ತ್ರ ಪಡೆಗಳಲ್ಲಿ ಮುಸ್ಲಿಮರಿಗೆ ಅಲ್ಲಿ ಪ್ರಾತಿನಿಧ್ಯ ಸಿಕ್ಕಿರುವುದು ಶೇ.6 ರಷ್ಟು. ಆದರೆ ಎರಡೂ ರಾಜ್ಯಗಳಲ್ಲಿ ಮುಸ್ಲಿಮರ ಮೇಲೆ ಬಾರಿ ಅನ್ಯಾಯ ನಡೆದಿದೆ. ಅಲ್ಲಿ ಭೀಕರ ಕೋಮು ದಂಗೆಗಳು ಸಂಭವಿಸಿವೆ. ಅಸ್ಸಾಂನಲ್ಲಿ ಮುಸ್ಲಿಮರ ಜನಸಂಖ್ಯಾ ಪ್ರಮಾಣ ಶೇ.31.1 ಇವರಿಗೆ ಸಿಕ್ಕಿರುವ ಪ್ರಾತಿನಿಧ್ಯ ಕೇವಲ ಶೇ.11 ರಷ್ಟು ; ಇಲ್ಲಿ ಮತ್ತೆ ಮತ್ತೆ ಕೋಮುದಂಗೆಗಳು ಸಂಭವಿಸಿವೆ; ಮುಸ್ಲಿಮರು ಪಕ್ಷಪಾತಕ್ಕೆ ಗುರಿಯಾಗಿದ್ದಾರೆ.

ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳಲ್ಲಿ ಪೋಲೀಸ್ ಮತ್ತಿತರ ಸಶಸ್ತ್ರ ಪಡೆಗಳಲ್ಲಿ ಮುಸ್ಲಿಮರಿಗೆ ಅವರ ಜನಸಂಖ್ಯೆ ಪ್ರಮಾಣದಷ್ಟು ಪ್ರಾತಿನಿಧ್ಯ ಸಿಕ್ಕಿಲ್ಲ;

ಮುಸ್ಲಿಮರ ಜನಸಂಖ್ಯೆ ಪ್ರಮಾಣ ಈ ರಾಜ್ಯಗಳಲ್ಲಿ ಕ್ರಮವಾಗಿ ಶೇ.25ರಷ್ಟು ಮತ್ತು ಶೇ.26 ರಷ್ಟು ಇದ್ದರೆ, ಅವರಿಗೆ ಸಿಕ್ಕಿರುವ ಪ್ರಾತಿನಿಧ್ಯ ಕ್ರಮವಾಗಿ ಶೇ.7% ಮತ್ತು ಶೇ.13 ರಷ್ಟು ಮಾತ್ರ. ಆದರೂ ಈ ರಾಜ್ಯಗಳಲ್ಲಿ ಮುಸ್ಲಿಮರ ಮೇಲೆ ಗಮನಾರ್ಹ ಪ್ರಮಾಣದಲ್ಲಿ ದೌರ್ಜನ್ಯಗಳು ನಡೆದಿಲ್ಲ; ಭಾರಿ ಕೋಮುದಂಗೆಗಳು ಸಂಭವಿಸಿಲ್ಲ.

ಇನ್ನು ಆಂಧ್ರಪ್ರದೇಶದಲ್ಲಿ ಪೋಲಿಸ್ ಮತ್ತಿತರ ಸಶಸ್ತ್ರ ಪಡೆಗಳಲ್ಲಿ ಅವರ ಜನಸಂಖ್ಯಾ ಪ್ರಮಾಣಕ್ಕಿಂತ ಹೆಚ್ಚಿನ ಪ್ರಾತಿನಿಧ್ಯ ದೊರಕಿದೆ. ಅಲ್ಲಿ ಮುಸ್ಲಿಮರ ಜನಸಂಖ್ಯೆ ಪ್ರಮಾಣ ಶೇ.9 ರಷ್ಟು ಇದ್ದರೆ, ಸಿಕ್ಕಿರುವ ಪ್ರಾತಿನಿಧ್ಯ ಶೇ.13 ರಷ್ಟಿದೆ (ಒಟ್ಟು 77,850 ಸಿಬ್ಬಂದಿ ಬಲದಲ್ಲಿ 10,312 ಜನ ಮುಸ್ಲಿಮರಿದ್ದಾರೆ). ಇಷ್ಟು ಗರಿಷ್ಠ ಪ್ರಾತಿನಿಧ್ಯ ದೇಶದ ಯಾವ ರಾಜ್ಯದಲ್ಲೂ ಸಿಕ್ಕಿಲ್ಲ. ಆದರೂ ಈ ರಾಜ್ಯದಲ್ಲಿ ಮುಸ್ಲಿಮರು ಭಯ-ಆತಂಕದ ನೆರಳಲ್ಲಿ ಬದುಕುತ್ತಿದ್ದಾರೆ.

ದೇಶದ ಐ.ಎ.ಎಸ್. ಅಧಿಕಾರಿಗಳಿಗೆ ಸೇವಾ ಆರಂಭದಲ್ಲಿ ಮತ್ತು ಸೇವಾ ಅವಧಿಯಲ್ಲಿ ತರಬೇತಿ ನೀಡುವ ಸಂಸ್ಥೆ, ಲಾಲ್ ಬಹಾದ್ದೂರ್ ಶಾಸ್ತ್ರಿ ರಾಷ್ಟ್ರೀಯ ಆಡಳಿತ ಅಕಾಡೆಮಿ. ಇದರ ವತಿಯಿಂದ ವಿತರಿಸಲಾದ ಪ್ರಕಟಣೆಯ ಪ್ರಕಾರ 1968 ರಿಂದ 1980ರವರೆಗೆ ದೇಶದ ವಿವಿಧ ಭಾಗಗಳಲ್ಲಿ ನಡೆದ ಕೋಮು ಹಿಂಸಾಚಾರದ ಪ್ರಕರಣಗಳಲ್ಲಿ ಪೋಲೀಸ್ ಮತ್ತಿತರ ಸಶಸ್ತ್ರ ಪಡೆಗಳ ಸಿಬ್ಬಂದಿ ವರ್ಗ ಮತ್ತು ನಾಗರೀಕರು ಸೇರಿದಂತೆ 1598 ಜನ ಮುಸ್ಲಿಮರು ಬಲಿಯಾದರೆ, 531 ಜನ ಮುಸ್ಲಿಮೇತರರು ಬಲಿಯಾಗಿದ್ದರು.

ಕೋಮು ಹಿಂಸಾಚಾರದಲ್ಲಿ ಪ್ರಾಣ ಕಳೆದುಕೊಂಡ ಪೋಲೀಸ್ ಮತ್ತಿತರ ಸಶಸ್ತ್ರ ಪಡೆಗಳ ಸಿಬ್ಬಂದಿ ವರ್ಗ ಮತ್ತು ನಾಗರೀಕರ ಬಗ್ಗೆ ಕಳೆದ 20 ವರ್ಷಗಳ ದಾಖಲೆಗಳನ್ನು ಸಂಗ್ರಹಿಸಿರುವ ಅಸಗರ್ ಅಲಿ ಇಂಜಿನಿಯರ್ ಪ್ರಕಾರವೂ 'ಕೋಮುದಂಗೆಗಳಲ್ಲಿ ಮತ್ತು ಹಿಂಸಾಚಾರದಲ್ಲಿ ಮುಸ್ಲಿಮೇತರರಿಗಿಂತ ಮುಸ್ಲಿಮರು ಮೂರು ಪಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಬಲಿಯಾಗಿದ್ದಾರೆ. 1970ರ ಚಾವಂಡಿ ದಂಗೆ, 1976ರ ಅಲಿಗಢ ದಂಗೆ, 1982 ರ ಮೀರತ್ ದಂಗೆ, ಹೀಗೆ ಭೀಕರ ಕೋಮುಗಲಭೆಗಳ ಸಂದರ್ಭಗಳಲ್ಲಿ, ಪೋಲೀಸರಿಂದ ನಡೆದ ಬಹುತೇಕ ಬಂಧನಗಳು, ಬಳಸಲಾದ ಬಲಪ್ರಯೋಗ, ನಡೆಸಲಾದ ತನಿಖೆಗಳಲ್ಲಿ ಮುಸ್ಲಿಂ ವಿರೋಧಿ ಭಾವನೆ ದಟ್ಟವಾಗಿ ವ್ಯಕ್ತವಾಗಿತ್ತು. ಇವುಗಳಷ್ಟೇ ಅಲ್ಲದೇ ಬಹುತೇಕ ಎಲ್ಲಾ ಕೋಮುದಂಗೆ/ಹಿಂಸಾಚಾರ ಪ್ರಕರಣಗಳ ಬಳಿಕ ಮುಸ್ಲಿಮರೇ ಗರಿಷ್ಠ ಪ್ರಮಾಣದಲ್ಲಿ ವಿಚಾರಣೆಗೆ ಗುರಿಯಾಗಿದ್ದಾರೆ. ಗುಪ್ತಚಾರ / ಪೋಲೀಸ್ ಪಡೆಗಳ ಗುಮಾನಿಯ ನೋಟ ಮೊದಲು ಮುಸ್ಲಿಮರ ಮೇಲೆ ಬಿದ್ದಿದೆ. ಮುಸ್ಲಿಮರು ಗರಿಷ್ಠ ಸಂಖ್ಯೆಯಲ್ಲಿ ಸಂಶಯಾಸ್ಪದರೆನಿಸಿದ್ದಾರೆ; ಮುಸ್ಲಿಮರು ಹೆಚ್ಚಿನ ಪ್ರಮಾಣದಲ್ಲಿ ಬೆದರಿಸಲ್ಪಟ್ಟಿದ್ದಾರೆ. ಆರೋಪಿಗಳಲ್ಲಿ ಮುಸ್ಲಿಮರೇ ಹೆಚ್ಚಿದ್ದಾರೆ. ಅಪರಾಧಿಗಳಲ್ಲೂ ಮುಸ್ಲಿಮರ ಸಂಖ್ಯೆಯೇ ಹೆಚ್ಚಾಗಿದೆ.

ಪೋಲೀಸ್ ಮತ್ತಿತರ ಸಶಸ್ತ್ರ ಪಡೆಗಳು ತೋರುತ್ತಾ ಬಂದಿರುವ ಈ ಪಕ್ಷಪಾತ ಧೋರಣೆಗೆ ಹಲವು ಕಾರಣಗಳಿವೆಯಷ್ಟೆ. ಅವುಗಳಲ್ಲಿ ಆರ್ಥಿಕತೆಯು ಪ್ರಮುಖವಾದುದು. ಆರ್ಥಿಕತೆಯ ಭಾಗವಾಗಿ ಪರಿಗಣಿಸಲ್ಪಡುವ ನಗರೀಕೃತ ಬದುಕಿನ ಪರಿಣಾಮವನ್ನು ಕಡೆಗಣಿಸಲಾಗದು. ಮಿಚಿಗಾನ್ ವಿಶ್ವವಿದ್ಯಾಲಯದಲ್ಲಿ ದಕ್ಷಿಣ ಏಷ್ಯಾ ಅಧ್ಯಯನ ಕೇಂದ್ರ ನಿರ್ದೇಶಕರಾದ ಅಶುತೋಷ್ ವಾರ್ಷ್ನೆ ಅವರು ನಡೆಸಿದ ವಿಶ್ಲೇಷಣೆಯಂತೆ.'1950 ರಿಂದ 1995ರ ಅವಧಿಯಲ್ಲಿ ನಡೆದ ಎಲ್ಲಾ ಭಾರಿ ಕೋಮುದಂಗೆಗಳು ಭಾರತದ ನಗರ ಪ್ರದೇಶಗಳಲ್ಲೇ ನಡೆದಿದೆ. ಆರ್ಥಿಕತೆಯೇ ಈ ದಂಗೆಗಳ ಹಿಂದಿನ ಪ್ರತ್ಯಕ್ಷ ಅಥವಾ ಪರೋಕ್ಷ ಕಾರಣವಾಗಿದೆ'

ಜಸ್ಟೀಸ್ ರಾಜೆಂದರ್ ಸಾಚಾರ್ ವರದಿಯಲ್ಲಿನ ಅಂಕಿ-ಅಂಶಗಳ ಪ್ರಕಾರ ಮಹಾರಾಷ್ಟ್ರದಲ್ಲಿ ಮುಸ್ಲಿಮರ ಜನಸಂಖ್ಯೆ ಶೇ.10.6% ರಷ್ಟಿದೆ. ಆದರೆ ಆ ರಾಜ್ಯದ ಜೈಲುಗಳಲ್ಲಿ ಇರುವ ಅಪರಾಧಿಗಳಲ್ಲಿ ಮುಸ್ಲಿಮರ ಪ್ರಮಾಣ 32.4% ರಷ್ಟಿದೆ. ಜೈಲುಗಳಲ್ಲಿ ಇರುವ ವಿಚಾರಣಾಧೀನ ಕೈದಿಗಳಲ್ಲಿ ಮುಸ್ಲಿಮರ ಪ್ರಮಾಣ ಶೇ.40.3 ರಷ್ಟಿದೆ.

ಮುಂಬಾಯಿ ಇತರ ಮಹಾನಗರಗಳಂತೆ ಅಲ್ಲ, ಅದು ಭಾರತದ ಅಪರಾಧ ಲೋಕದ ರಾಜಧಾನಿಯೂ ಹೌದು. ನ್ಯಾಷನಲ್ ಕ್ರೈಂ ರಿಕಾರ್ಡ್ ಬ್ಯೂರೋ 2005ರಲ್ಲಿ ಸಂಗ್ರಹಿಸಿದ ಅಂಕಿ-ಅಂಶಗಳ ಪ್ರಕಾರ, ದೇಶದ 35 ಮಹಾನಗರ/ ನಗರಗಳಲ್ಲಿ ದಾಖಲಾದ ಒಟ್ಟು ಅಪರಾಧಗಳಲ್ಲಿ ಶೇ.10% ರಷ್ಟು ಮುಂಬಯಿಯಲ್ಲಿ ಸಂಭವಿಸುತ್ತವೆ. ಇಲ್ಲಿನ ಕಳ್ಳತನ, ದರೋಡೆ, ಕೊಲೆ, ಕಿಡ್ನಾಪ್, ಕಳ್ಳನೋಟು ಮುದ್ರಣ ಮತ್ತು ಚಲಾವಣೆ, ಜೂಜು, ಬೆದರಿಕೆ ಹಾಕಿ ಹಣ ಸುಲಿಯುವುದು, ಅಕ್ರಮ ಶಸ್ತ್ರಾಸ್ತ್ರ/ ಮಾದಕ ವಸ್ತುಗಳ ಮಾರಾಟದಂತಹ ಅಪರಾಧಗಳಲ್ಲಿ ಮುಸ್ಲಿಮರು ಹೆಚ್ಚಿನ ಪ್ರಮಾಣದಲ್ಲಿ ಭಾಗಿಯಾಗಿದ್ದಾರೆ. ಇತ್ತೀಚಿನ ಉದಾಹರಣೆಗಳನ್ನೇ ಗಮನಿಸಿ. 2003ರಲ್ಲಿ ನಡೆದ ಬಾಂಬ್ ಸ್ಫೋಟ ಪ್ರಕರಣದಲ್ಲಿ ಮುಂಬಾಯಿ ಪೋಲಿಸರು ಒಟ್ಟು 216 ಜನರು ಟಾಡಾ ಕಾಯ್ದೆ ಅಡಿ ಬಂಧಿಸಿದರು. ಈ ಪೈಕಿ 197 ಜನ ಮುಸ್ಲಿಮರಿದ್ದರು. ಈ ಕಾಯ್ದೆಯು ನಾಗರೀಕ ಹಕ್ಕು ವಿರೋಧಿ ಅಂಶಗಳನ್ನು ಒಳಗೊಂಡಿದ್ದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಇದನ್ನು ರದ್ದುಪಡಿಸಿ, ಪೋಟಾ ಕಾಯ್ದೆಯನ್ನು ಜಾರಿಗೆ ತಂದಿತು.(ಈ ಕಾಯ್ದೆಯು 2004ರಿಂದ ರದ್ದಾಗಿದೆ) ಆದರೆ ಈ ಪ್ರಕರಣದಲ್ಲಿ 138 ಆರೋಪಿಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆದಿದ್ದು, 101 ಜನರಿಗೆ ಶಿಕ್ಷೆಯಾಗಿದೆ. 37 ಜನ ನಿರಪರಾಧಿಗಳೆಂದು ತೀರ್ಮಾನವಾಗಿ, ಬಿಡುಗಡೆ ಹೊಂದಿದ್ದಾರೆ. ಇನ್ನೂ 78 ಜನ ಆರೋಪಿಗಳಿಗೆ ಸಂಬಂಧಿಸಿದ ವಿಚಾರಣೆ ಮುಗಿಯಬೇಕಿದೆ.

ಟಾಡಾದಂತೆ ಪೋಟಾ ಕೂಡ ಕರಾಳ ಕಾಯ್ದೆ, ಇದರ ದುರ್ಬಳಕೆ ವಿಪರೀತವಾಗಿ ಆಯಿತು. ಇದಕ್ಕೆ ಬಲಿಯಾದವರು ಬಹುತೇಕವಾಗಿ ಮುಸ್ಲಿಮರು. ಅತೀಫ್ ಮುಲ್ಲಾ ಎಂಬ ಯುವಕನ ಉದಾಹರಣೆ ಒಂದನ್ನು ಗಮನಿಸಿದರೂ, ಪೋಟಾ ಕಾಯ್ದೆಯ ಭೀಕರತೆ ಅರಿವಾಗುತ್ತದೆ. ಮುಂಬಾಯಿಯ ಮುಳುಂದ್ ಪ್ರದೇಶದಲ್ಲಿ ನಾಡ ಬಾಂಬ್ ನೀಡಿದ ಪ್ರಕರಣದಲ್ಲಿ ಆರೋಪಿಯಾಗಿ ಅತೀಫ್ ಮುಲ್ಲಾನ ಬಂಧನವಾಯಿತು. ಪೋಟಾ ಕಾಯ್ದೆ ಪ್ರಕಾರ ಮೊಕದ್ದಮೆ ದಾಖಲು ಮಾಡಿದ ಪೋಲಿಸರು, ಸಾಕ್ಷಿಗಳನ್ನು ಕೋರ್ಟಿಗೆ ಹಾಜರುಪಡಿಸಲು ಒಟ್ಟು 33 ತಿಂಗಳುಗಳನ್ನು ತೆಗೆದುಕೊಂಡರು. ಆದರೂ ಅತೀಫ್ ಮುಲ್ಲಾನನ್ನು ಅಪರಾಧಿ ಎಂದು ಸಾಬೀತುಪಡಿಸಲು ಪೋಲಿಸರಿಗೆ ಆಗಲಿಲ್ಲ. ಅವನನ್ನು ಬಿಡುಗಡೆ ಮಾಡಿದರು. ಯಾವ ತಪ್ಪು ಇಲ್ಲದೆ ಅವನನ್ನು 33 ತಿಂಗಳು ಪೋಲೀಸ್ ಕಸ್ಟಡಿಯಲ್ಲಿ ಇಡಲಾಗಿತ್ತು. ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿ ಅಪರಾಧಿಗಳಾಗುತ್ತಿರುವುದಕ್ಕೆ ಕಾರಣ ನಿರುದ್ಯೋಗ, ಅಭದ್ರತೆ ಹಾಗೂ ಅಪನಂಬಿಕೆಗೆ ಪಕ್ಷಪಾತ ಮನೋಭಾವಕ್ಕೆ ಅವರು ಬಲಿಪಶುವಾಗುತ್ತಿರುವುದು. ಆದುದರಿಂದ ಈ ಕಾರಣಗಳನ್ನು ಪರಿಗಣಿಸಿ, ಪರಿಹಾರೋಪಾಯಗಳನ್ನು ಕೈಗೊಳ್ಳಬೇಕು.'

ಮುಸ್ಲಿಮರು ಈ ಬಾರಿ ಹೊರಳುವ ಪ್ರಕ್ರಿಯೆಯನ್ನು ಗಮನಿಸಿದರೆ, ವಿಷಯದ ಗಂಭೀರತೆ ಮನವರಿಕೆಯಾಗುತ್ತದೆ. ನಿರುದ್ಯೋಗ ಎರಡನೇಯ ಕಾರಣ ಕಂಡು ಅನ್ಯಾಯಕ್ಕೆ / ಅಪನಂಬಿಕೆಗೆ/ ಪಕ್ಷಪಾತ ಮನೋಭಾವಕ್ಕೆ ಒಳಗಾಗಿರುವ ಭಾವನೆಯು ಬೆಳೆದಿರುವುದು ಮೊದಲನೆಯ ಕಾರಣವಾಗಿ ಕಾಣುತ್ತದೆ. ಕುಟುಂಬದಲ್ಲಿ ಅಥವಾ ತನ್ನ ಧಾರ್ಮಿಕರಲ್ಲಿ ಒಬ್ಬರು/ಕೆಲವರು ಪೋಲೀಸ್ ಅನ್ಯಾಯಕ್ಕೆ ತುತ್ತಾದರು ಮತ್ತು ಅಪನಂಬಿಕೆ/ದೇಶದ್ರೋಹದ ಆರೋಪಕ್ಕೆ ಗುರಿಯಾದುದು ಗೊತ್ತಾದಾಗ ಮುಸ್ಲಿಂ ಯುವಕ ವ್ಯಗ್ರವಾಗುತ್ತಾನೆ. ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತಾನೆ. ಸಮಾಜ/ಪೋಲೀಸ್ ತನಗೆ ಸ್ಪಂದಿಸುತ್ತಿಲ್ಲ ಎಂಬ ಭಾವನೆ ಬೆಳೆದಾಗ ಆಕ್ರೋಶಗೊಳ್ಳುತ್ತಾನೆ. ಪ್ರಭುತ್ವ ಮತ್ತು ಸಮಾಜದ ವಿರುದ್ಧ ನಿಲ್ಲುತ್ತಾನೆ. ಈ ಹಂತದಲ್ಲಿ ಅವನು ಉಗ್ರಗಾಮಿ ಸಂಘಟನೆಯ ಅಥವಾ ಗಡಿಯಾಚೆ ಸಕ್ರಿಯವಾಗಿರುವ ಹಿಂಸಾವಾದಿ ಸಂಘಟನೆಯ ಸಂಪರ್ಕವೆನ್ನೇದಾದರೂ ಬಂದು ಬಿಟ್ಟರೆ, ಅವನೂ ಉಗ್ರಗಾಮಿಯಾಗಿ ಪರಿವರ್ತನೆಗೊಂಡು ಬಿಡುತ್ತಾನೆ. ಆಗ ಅವನ ಮೇಲೆ, ಅವನ ಕುಟುಂಬದವರ ಮೇಲೆ, ಅವರ ಧರ್ಮೀಯರ ಮೇಲೆ ಪೋಲೀಸರ ಗುಮಾನಿ/ದಮನ ದೌರ್ಜನ್ಯ ಇನ್ನೂ ಹೆಚ್ಚುತ್ತವೆ. ಇದರಿಂದಾಗಿ ಇನ್ನಷ್ಟು ಜನ ಮುಸ್ಲಿಂ ಯುವಕರು ಉಗ್ರಗಾಮಿಗಳ ಕಡೆ ಒಲಿಯುವ ಪ್ರಕ್ರಿಯೆ ಜರುಗುತ್ತದೆ. ಉಗ್ರಗಾಮಿ ಚಟುವಟಿಕೆಗಳಿಗೆ ಸಾಹಸವಾದಿ, ಆರ್ಥಿಕ ಆಯಾಮಗಳು ಇರುವುದರಿಂದ, ಈ ಕಡೆ ಯುವಕರು ಹೆಚ್ಚು ಆಕರ್ಷಿತರಾಗುತ್ತಾರೆ. ಸ್ವಾತಂತ್ರ್ಯ ನಂತರ ಈ ರಾಜ್ಯದಲ್ಲಿ ಸಂಭವಿಸಿದ ಹಿಂದೂ–

ಮುಸ್ಲಿಂ ದಂಗೆಗಳನ್ನು ನಿಗ್ರಹಿಸಲು ಸರ್ಕಾರ, 1969 ರವರೆಗೆ ಹೆಣಗಿ, ನಂತರ ಕೋಮುದಂಗೆಗಳಿಗೆ ಗುರಿಯಾದ ಹಳ್ಳಿ –ಪಟ್ಟಣಗಳ ಮುಸ್ಲಿಮರನ್ನು ಹತ್ತಿರದ ಪಟ್ಟಣ ನಗರಗಳಿಗೆ ಸ್ಥಳಾಂತರಿಸುವ ಕ್ರಮವನ್ನು ಕೈಗೊಳ್ಳಲು ಪ್ರಾರಂಭಿಸಿತು. ಇದುವರೆಗೆ ಗುಜರಾತ್ ರಾಜ್ಯದೊಳಗೆ ಲಕ್ಷಾಂತರ ಮುಸ್ಲಿಮರು ಸ್ಥಳಾಂತರಗೊಳಿಸಲ್ಪಟ್ಟಿದ್ದಾರೆ.

ಗುಜರಾತ್ ರಾಜಧಾನಿ ಅಹ್ಮದಾಬಾದ್ ಮಹಾನಗರದಲ್ಲಿರುವ ಮುಸ್ಲಿಂ ಪ್ರದೇಶಗಳಲ್ಲಿ ಮುಖ್ಯವಾದವು. ಶಪಾ ಆಲಂ ಮತ್ತು ಜುಹಾಪುರಾಗಳು. ಇಲ್ಲಿ ಕ್ರಮವಾಗಿ 5 ಲಕ್ಷ ಮತ್ತು 3.5 ಲಕ್ಷ ಮುಸ್ಲಿಂ ಜನಸಂಖ್ಯೆ ಇದೆ. ಮಿಲ್ಲರ್ ಬಸ್ತಿ, ಮಹಾನಗರ. ಸಿಟಿಜನ್ ನಗರ ಮುಂತಾದವು ಮುಸ್ಲಿಂ ಪ್ರದೇಶಗಳು. ಇಲ್ಲೆಲ್ಲಾ ಸುಮಾರು ಒಂದೊಂದು ಲಕ್ಷ ಮುಸ್ಲಿಮರು ಇದ್ದಾರೆ. ಇಲ್ಲೆಲ್ಲಾ ಜನ ಸಾಂದ್ರತೆ ಹೆಚ್ಚು. ನಾಗರೀಕ ಸೌಲಭ್ಯಗಳು ಕಡಿಮೆ. ಮುಸ್ಲಿಮರು ಹೆಚ್ಚಿರುವ ಕಾರಣಕ್ಕೇನೇ ಈ ಪ್ರದೇಶಗಳು ಪೋಲೀಸ್ ಪಾಲಿಗೆ 'ಸೂಕ್ಷ್ಮ' ಪ್ರದೇಶಗಳು, ಗಂಭೀರ ಪ್ರಕರಣಗಳ ಜನ್ಮಸ್ಥಳಗಳು; ಸಂಶಯಾಸ್ಪದ ದೃಷ್ಟಿಗೆ ಅರ್ಹವಾದವುಗಳು; ಹಿಂದುತ್ವವಾದಿಗಳ ಪಾಲಿಗೆ ಇವು ಅಕ್ರಮ ಚಟುವಟಿಕೆಗಳ ಕೇಂದ್ರಗಳು; 'ಮಿನಿ ಪಾಕಿಸ್ತಾನ'ಗಳು; ದೇಶದ್ರೋಹಿ ಕುತಂತ್ರಗಳ ಕಾರಸ್ಥಾನಗಳು.

ಈ ಎಲ್ಲಾ ನರಕ ಸದೃಶ್ಯ ಸ್ಥಿತಿಗತಿಗೆ ಮುಖ್ಯ ಕಾರಣ ಮುಸ್ಲಿಮರು ಮುಖ್ಯವಾಹಿನಿಯ ರಾಜಕಾರಣಕ್ಕೆ ಬಂದು ಚಮಚಾ ರಾಜಕಾರಣವನ್ನು ತಿರಸ್ಕರಿಸಿ ತಮ್ಮ ಪಾಲನ್ನು ಪಡೆಯದಿರುವುದು. ಭವಿಷ್ಯದಲ್ಲಿ ಮುಸ್ಲಿಂ ಸಮುದಾಯಗಳನ್ನು ಬಿಂಬಿಸುವ ನಾಯಕತ್ವವು ಬಾಬಾ ಸಾಹೇಬ್ ಅಂಬೇಡ್ಕರ್ ವಾದದಲ್ಲಿ ನಂಬಿಕೆಯುಳ್ಳ ಮುಸ್ಲಿಂ ರಾಜಕೀಯ ನಾಯಕತ್ವ ಬೆಳೆಯಬೇಕಿದೆ.

***********************



ಸ್ವತಂತ್ರ ಭಾರತದ ಮುಸ್ಲಿಂ ಸಮುದಾಯಗಳ ದಿಕ್ಕು ದೆಸೆಯನ್ನು ಧಾರ್ಮಿಕ ಹಾಗೂ ರಾಜಕೀಯ ನಾಯಕತ್ವ ನೀಡುತ್ತಿತ್ತು. ಮಂಡಲ್ ವರದಿಯ ಜಾರಿ ನಂತರ ಮುಸ್ಲಿಂರ ರಾಜಕೀಯ ನಾಯಕತ್ವ ಒಂದು ಸ್ಪಷ್ಟ ಸ್ವರೂಪದಲ್ಲಿ ಬೆಳೆಯಿತು. ಬಾಬ್ರಿಮಸೀದಿಯ ಧ್ವಂಸದ ನೆಪದಲ್ಲಿ 11 ಸಾವಿರ ಜನ ದಲಿತ, ಹಿಂದುಳಿದ ಹಾಗೂ ಮುಸ್ಲಿಂರ ಕಗ್ಗೊಲೆಯ ನಂತರ ರಾಷ್ಟ್ರ ರಾಜಕಾರಣದಲ್ಲಿ ಮುಸ್ಲಿಂ ರಾಜಕೀಯ ನಾಯಕತ್ವ ಏಕಾಂಗಿಯಾಯಿತು. ಅಂದು ಬ್ರಾಹ್ಮಣೇತರ ಶೂದ್ರ ನಾಯಕತ್ವಕ್ಕೆ ಸಿಕ್ಕಷ್ಟು ಮನ್ನಣೆ ಮುಸ್ಲಿಂ ರಾಜಕೀಯ ನಾಯಕತ್ವಕ್ಕೆ ದೊರಕಲಿಲ್ಲ. ಆದರೆ ವರ್ತಮಾನದ ರಾಜಕೀಯ ಸಂದರ್ಭದಲ್ಲಿ ಪ್ರಾತಿನಿಧ್ಯತೆ ದೊರೆಯಲಿಲ್ಲ ಎಂಬುದು ಹೆಚ್ಚಿನ ಮುಸ್ಲಿಂರಲ್ಲಿ ಅಸಾಮಾಧಾನವನ್ನು ಹೆಚ್ಚಿಸಿದೆ.

ಈ ಎಲ್ಲಾ ನರಕ ಸದೃಶ್ಯ ಸ್ಥಿತಿಗತಿಗೆ ಮುಖ್ಯ ಕಾರಣ ಮುಸ್ಲಿಮರು ಮುಖ್ಯವಾಹಿನಿಯ ರಾಜಕಾರಣಕ್ಕೆ ಬಂದು ಚಮಚಾ ರಾಜಕಾರಣವನ್ನು ತಿರಸ್ಕರಿಸಿ ತಮ್ಮ ಪಾಲನ್ನು ಪಡೆಯದಿರುವುದು. ಭವಿಷ್ಯದಲ್ಲಿ ಮುಸ್ಲಿಂ ಸಮುದಾಯಗಳನ್ನು ಬಿಂಬಿಸುವ ನಾಯಕತ್ವವು ಬಾಬಾ ಸಾಹೇಬ್ ಅಂಬೇಡ್ಕರ್ ವಾದದಲ್ಲಿ ನಂಬಿಕೆಯುಳ್ಳ ಮುಸ್ಲಿಂ ಸಾಮಾಜಿಕ ರಾಜಕೀಯ ನಾಯಕತ್ವ ಬೆಳೆಯಬೇಕಿದೆ.

ಖಾಸಿಂಸಾಬ್.ಎ

Rs. 10.00